ಸಂಪಾದಕರು :
ಎಂ.ಎಸ್. ವಿಕಾಸ್

ಭಾನುವಾರ, ಸೆಪ್ಟೆಂಬರ್ 03, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 112 RNI : 27369/75


# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ


1974 50 2023

janathavani@mac.com
www.janathavani.com
☎ 08192 254736 91642 99999




## ಸಮಾಜಕ್ಕೆ ಒಳಿತು ಮಾಡುವ ತುಡಿತವಿರಲಿ

### 'ಬಿ.ವಿಮಲದಾಸ್ ಸೇವಾ ಪ್ರಶಸ್ತಿ ಪ್ರದಾನ' ಕಾರ್ಯಕ್ರಮದಲ್ಲಿ ವಾಸಂತಿ ಉಪ್ಪಾರ್

ದಾವಣಗೆರೆ, ಆ. 2- ಯಾವ ಕ್ಷೇತ್ರವಿರಲಿ ನಿರ್ದಿಷ್ಟ ಗುರಿ ಇದ್ದರೆ ಸಾಧನೆ ಸಾಧನೆ ಸಾಧ್ಯವಿದೆ. ಸಾಧನೆ ಜೊತೆ ಸಮಾಜಕ್ಕೆ ಒಳಿತು ಮಾಡುವ ತುಡಿತವೂ ಇರಬೇಕು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕಿ ವಾಸಂತಿ ಉಪ್ಪಾರ್ ಹೇಳಿದರು.

ಜಾಗೃತ ಮಹಿಳಾ ಸಂಘದಿಂದ ಶನಿವಾರ ಹಮ್ಮಿಕೊಳ್ಳಲಾಗಿದ್ದ 'ಬಿ.ವಿಮಲದಾಸ್ ಸೇವಾ ಪ್ರಶಸ್ತಿ ಪ್ರದಾನ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ನಾವು ಮಾಡುವ ವೃತ್ತಿಯಲ್ಲಿ ಧನಾತ್ಮಕ ಚಿಂತನೆ, ನಮ್ಮ ಕೆಲಸದಿಂದ ಇತರರಿಗೆ ಒಳಿತಾಗಲೀ ಎಂಬ ಭಾವನೆ ಇದ್ದಲ್ಲಿ ಅದು ನಮ್ಮ ಸಾಧನೆಗೆ ಮೆಟ್ಟಿಲಾಗುತ್ತದೆ. ನಮಗೆ ತೃಪ್ತಿಯನ್ನೂ ನೀಡುತ್ತದೆ. ಜೊತೆಗೆ ಇತರರ ಒಳಿತಿಗೂ

**ರಾಷ್ಟ್ರಪತಿ ಅವರಿಂದ ಫ್ಲಾರೆನ್ಸ್ ನೈಟಿಂಗೇಲ್ ಪ್ರಶಸ್ತಿ ಪಡೆದ ಹೊನ್ನಾಳಿ ಜನರಲ್ ಆಸ್ಪತ್ರೆಯ ನರ್ಸ್ ಟಿ. ನಾಗರತ್ನ ಅವರಿಗೆ ಬಿ.ವಿಮಲದಾಸ್ ಸೇವಾ ಪ್ರಶಸ್ತಿ ಪ್ರದಾನ**

ಕಾರಣವಾಗುತ್ತದೆ ಎಂದು ಅಭಿಪ್ರಾಯಿಸಿದರು.

ಪ್ರಶಸ್ತಿ ಪುರಸ್ಕೃತರನ್ನು ಜನರು ಗುರುತಿಸುತ್ತಾರೆ, ಸನ್ಮಾನಿಸುತ್ತಾರೆ. ಆದರೆ ಆ ಸನ್ಮಾನಗಳಿಗೆ ನಾವು ಯೋಗ್ಯರಾ? ಎಂದು ಪ್ರಶ್ನಿಸಿಕೊಳ್ಳಬೇಕು. ಇಲ್ಲದಿದ್ದರೆ ಅಹಂಕಾರ ಹೆಚ್ಚಾಗುತ್ತದೆ. ಆದರೆ ಇಂದು (5ನೇ ಪುಟಕ್ಕೆ)

### ಪ್ರಶಸ್ತಿಗಳು ಜವಾಬ್ದಾರಿ ಹೆಚ್ಚಿಸಿವೆ: ಟಿ.ನಾಗರತ್ನ

ದಾವಣಗೆರೆ, ಆ. 2- ಹಿರಿಯ ಚೇತನ, ಸಮಾಜ ಸೇವೆ, ಮಹಿಳೆಯರ ಸೇವೆಯಲ್ಲಿ ಮಹತ್ತರ ಪಾತ್ರ ವಹಿಸಿದ್ದ ವಿಮಲದಾಸ್ ಅವರ ಹೆಸರಿನ ಪ್ರಶಸ್ತಿ ಸ್ವೀಕರಿಸುತ್ತಿರುವುದು ನನ್ನ ಭಾಗ್ಯ. ಈ ಪ್ರಶಸ್ತಿಗಳು ಜವಾಬ್ದಾರಿಗಳನ್ನು ಹೆಚ್ಚಿಸಿವೆ ಎಂದು ರಾಷ್ಟ್ರಪತಿ ಶ್ರೀಮತಿ ದ್ರೌಪದಿ ಮುರ್ಮು ಅವರಿಂದ ಫ್ಲಾರೆನ್ಸ್ ನೈಟಿಂಗೇಲ್ ಪ್ರಶಸ್ತಿ ಪುರಸ್ಕೃತೆ, ಹೊನ್ನಾಳಿ ಜನರಲ್ ಆಸ್ಪತ್ರೆಯ ನರ್ಸ್ ಟಿ. ನಾಗರತ್ನ ಹೇಳಿದರು.

ಜಾಗೃತ ಮಹಿಳಾ (2ನೇ ಪುಟಕ್ಕೆ)

## ನಾಳೆ ಬರ ತಾಲ್ಲೂಕು ಘೋಷಣೆ ತೀರ್ಮಾನ

ಬಾಗಲಕೋಟೆ, ಸೆ. 2- ಬರ ಪೀಡಿತ ತಾಲ್ಲೂಕುಗಳ ಘೋಷಣೆ ಬಗ್ಗೆ ನಾಳೆ ಸೋಮ ವಾರದಂದು ತೀರ್ಮಾನಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡಿದ ಅವರು, 113 ತಾಲ್ಲೂಕುಗಳನ್ನು ಈಗಾಗಲೇ ಬರ ಪೀಡಿತ ಎಂದು ಗುರುತಿಸಲಾಗಿದೆ. ಇನ್ನೂ 73 ತಾಲ್ಲೂಕುಗಳಲ್ಲಿ ಜಂಟಿ ಸಮೀಕ್ಷೆ ನಡೆಸಲಾಗುತ್ತಿದೆ. ಅವುಗಳೂ ಸೇರ್ಪಡೆಯಾಗುವ ಸಾಧ್ಯತೆ ಇದೆ ಎಂದವರು ಹೇಳಿದ್ದಾರೆ.

ಈ ವರ್ಷ ಮಳೆಯ ಕೊರತೆ ಇದೆ. ಜೂನ್ ತಿಂಗಳಲ್ಲಿ ಶೇ.56ರ ಕೊರತೆಯಾಗಿತ್ತು. ಜುಲೈನಲ್ಲಿ ಬಹುತೇಕ ಸಾಮಾನ್ಯ ಮಳೆಯಾಗಿತ್ತು. ಆದರೆ, ಆಗ ಸ್ಟ್ ತಿಂಗಳಲ್ಲಿ ಮಳೆ ಕೊರತೆಯಾಗಿದೆ ಎಂದವರು ಹೇಳಿದರು.

**ಘೋಷಣೆ ನಂತರ ಕೇಂದ್ರಕ್ಕೆ ನೆರವು ಕೋರಿ ಮನವಿ**

ಬರ ಪರಿಸ್ಥಿತಿ ಕುರಿತು ಸಂಪುಟದ ಉಪ ಸಮಿತಿ ರಚಿಸಲಾಗಿದೆ. ಸಮಿತಿ ಈಗಾಗಲೇ ಮೂರು ಸಭೆ ನಡೆಸಿದೆ. ಸೋಮವಾರ ಮತ್ತೊಂದು ಸಭೆ ನಡೆಯಲಿದೆ ಎಂದು ಸಿದ್ದರಾಮಯ್ಯ ಹೇಳಿದರು.

113 ತಾಲ್ಲೂಕುಗಳಲ್ಲಿ ಬರಗಾಲ ಇದೆ ಎಂದು ಜಂಟೀ ಸಮೀಕ್ಷೆ ನಡೆಸಲಾಗಿದೆ. ಇದಲ್ಲದೆ 73 ತಾಲ್ಲೂಕುಗಳಲ್ಲಿ ಬರಗಾಲ ಉಂಟಾಗಿದೆ ಎಂಬ ಮಾಹಿತಿ ಇದೆ. ಅದಕ್ಕೂ ಜಂಟಿ ಸಮೀಕ್ಷೆ ನಡೆಸಿ ವರದಿ ಬಂದ ನಂತರ ತೀರ್ಮಾನ ಕೈಗೊಳ್ಳಲಾಗುವುದು ಎಂದವರು ತಿಳಿಸಿದರು.

ಬರ ಘೋಷಣೆಯ ನಂತರ ಕೇಂದ್ರ ಸರ್ಕಾರಕ್ಕೆ ನೆರವು ಕೋರಿ ಮನವಿ ಸಲ್ಲಿಸಲಾಗುವುದು. ಕೇಂದ್ರ ಸರ್ಕಾರದ ಸಮಿತಿಯು ಸಮೀಕ್ಷೆ ನಡೆಸಿದ ನಂತರ, ಎನ್.ಡಿ.ಆರ್.ಎಫ್. ಮಾರ್ಗಸೂಚಿಯಂತೆ ಹಣ ಬಿಡುಗಡೆ ಮಾಡುತ್ತದೆ ಎಂದವರು ಹೇಳಿದರು.

ರಾಜ್ಯ ಸರ್ಕಾರವೂ ಪರಿಹಾರ ಕಾರ್ಯಗಳಿಗೆ ಹಣ ವಿನಿಯೋಗಿಸಲಿದೆ. 2020 ರಿಂದ ಇಲ್ಲಿಯವರೆಗೆ ಪರಿಷ್ಕರಣೆ ಆಗಿಲ್ಲ. ಎನ್.ಡಿ.ಆರ್.ಎಫ್. ಮಾರ್ಗಸೂಚಿಗಳನ್ನು ಪರಿಷ್ಕರಿಸಲು ಹಾಗೂ ರಾಜ್ಯಗಳಿಗೆ ಹೆಚ್ಚು ಪರಿಹಾರ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ ಎಂದು ಸಿದ್ದರಾಮಯ್ಯ ಹೇಳಿದರು.

## ಇಸ್ರೋಗೆ ಈಗ ಸೂರ್ಯನ ಕಾಂತಿ

**ಮೊದಲ ಸೂರ್ಯ ಅಧ್ಯಯನ ಉಡಾವಣೆ ಯಶಸ್ವೀ**



ಶ್ರೀಹರಿಕೋಟ, ಸೆ. 2 – ಭಾರತೀಯ ಬಾಹ್ಯಾಕಾಶ ಸಂಸ್ಥೆಯಾದ ಇಸ್ರೋದ ಮೊದಲ ಸೂರ್ಯಯಾನ ಆದಿತ್ಯ ಎಲ್ 1 ಯಶಸ್ವಿಯಾಗಿ ಉಡಾವಣೆ ಗೊಂಡಿದೆ. 125 ದಿನಗಳ ಯಾತ್ರೆಯ ನಂತರ ಈ ಉಪಗ್ರಹ ಸೂರ್ಯನ ನಿರಂತರ ಅಧ್ಯಯನ ಸಾಧ್ಯವಾಗುವ ಕಕ್ಷೆ ಸೇರಲಿದೆ.

ಪಿ.ಎಸ್.ಎಲ್.ವಿ. ರಾಕೆಟ್ ಮೂಲಕ ಶನಿವಾರ ಉಡಾವಣೆ ನೆರವೇರಿಸಲಾಯಿತು. ಉಪಗ್ರಹವನ್ನು 235-19,500 ಕಿ.ಮೀ. ಕಕ್ಷೆಗೆ ಯಶಸ್ವಿಯಾಗಿ ಸೇರ್ಪಡೆ ಮಾಡಲಾಗಿದೆ ಎಂದು (2ನೇ ಪುಟಕ್ಕೆ)

## ನೀರು, ವಿದ್ಯುತ್ ಸಮಸ್ಯೆಗಳ ನಿಗಾ

### ತಾ.ಪಂ. ತ್ರೈಮಾಸಿಕ ಸಭೆಯಲ್ಲಿ ಶಾಸಕ ಹರೀಶ್ ಸೂಚನೆ



ಹರಿಹರ, ಸೆ. 2 - ಮಳೆಯ ಅಭಾವದಿಂದ ಕುಡಿಯುವ ನೀರು, ವಿದ್ಯುತ್ ಪೂರೈಕೆ ಸೇರಿದಂತೆ ಅನೇಕ ಸಮಸ್ಯೆಗಳು ಉಲ್ಬಣಗೊಳ್ಳುವ ಸಾಧ್ಯತೆಗಳು ಇದೆ. ಎಲ್ಲಾ ಇಲಾಖೆಗಳ ಅಧಿಕಾರಿಗಳು ಸಾರ್ವಜನಿಕರಿಗೆ ಯಾವುದೇ ರೀತಿಯ ತೊಂದರೆಗಳು ಬರದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವಂತೆ ಶಾಸಕ ಬಿ.ಪಿ. ಹರೀಶ್ ಹೇಳಿದರು.

ನಗರದ ತಾ.ಪಂ. ಕಚೇರಿಯ ಸಭಾಂಗಣದಲ್ಲಿ ನಡೆದ ತ್ರೈಮಾಸಿಕ ಸಾಮಾನ್ಯ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ತಾಲ್ಲೂಕಿನಲ್ಲಿ ಮಳೆ ಕಡಿಮೆಯಾಗಿ ಬೆಳೆಗಳು ಸಂಪೂರ್ಣ ಹಾಳಾಗಿವೆ. ವಿದ್ಯುತ್ ಪೂರೈಕೆ ಇಲ್ಲದೇ ರೈತರ ಪಂಪ್‌ಸೆಟ್‌ಗಳಿಗೆ ಸಮಸ್ಯೆ ಆಗಿದೆ.

ಕುಡಿಯುವ ನೀರಿನ ಪೂರೈಕೆಗೆ ಸಮಸ್ಯೆಯಾಗುವ ಲಕ್ಷಣ ಗಳಿವೆ. ಈ ಸಂದರ್ಭದಲ್ಲಿ ಅಧಿಕಾರಿಗಳು ಜಾಗೃತರಾಗಿ ಕೆಲಸ ಮಾಡಬೇಕು. ವ್ಯತ್ಯಾಸ ಆದರೆ, ಅಧಿಕಾರಿ ಗಳೇ ನೇರವಾಗಿ ಹೊಣೆಯಾಗುತ್ತಾರೆ ಎಂದು ಹೇಳಿದರು.

ಮಲೇಬೆನ್ನೂರು, ಸಿರಿಗೆರೆ ಸೇರಿದಂತೆ ಅನೇಕ ಗ್ರಾಮಗಳಿಗೆ ಉಕ್ಕಡಗಾತ್ರಿ ಗ್ರಾಮದ ಹತ್ತಿರದ ನದಿ ಯಿಂದ ನೀರು ಸರಬರಾಜು ಆಗುತ್ತದೆ. ಒಂದು ವೇಳೆ ಮುಂದೆ ದಿನಗಳಲ್ಲಿ ಮಳೆ ಕೈ ಕೊಟ್ಟರೆ ನದಿಗೆ ಮರುಳಿನ ಚೀಲವನ್ನು ಹಾಕಿ ನೀರನ್ನು ಶೇಖರಣೆ ಮಾಡಿಕೊಳ್ಳಲು ಅಧಿಕಾರಿಗಳು ಮುಂದಾಗಬೇಕಿದೆ ಎಂದರು.

ಸರ್ವೇ ಇಲಾಖೆ ಕಾರ್ಯನಿರ್ವಹಣೆ ಬಗ್ಗೆ ದೂರುಗಳಿವೆ. 1,500ಕ್ಕೂ ಹೆಚ್ಚು ಅರ್ಜಿಗಳು ಬಾಕಿ ಇವೆ. ತ್ವರಿತವಾಗಿ ಕಾರ್ಯ (2ನೇ ಪುಟಕ್ಕೆ)

## ಏಕಕಾಲಕ್ಕೆ ಚುನಾವಣೆ ಕೇಂದ್ರದಿಂದ ಎಂಟು ಸದಸ್ಯರ ಸಮಿತಿ ರಚನೆ

ನವದೆಹಲಿ, ಸೆ. 2 – ಲೋಕಸಭೆ ಹಾಗೂ ರಾಜ್ಯ ವಿಧಾನಸಭೆಗಳಿಗೆ ಏಕಕಾಲಕ್ಕೆ ಚುನಾವಣೆ ನಡೆಸುವ ಕುರಿತು ಪರಿಶೀಲಿಸಲು ಹಾಗೂ ಶಿಫಾರಸ್ಸುಗಳನ್ನು ಸಲ್ಲಿಸಲು ಕೇಂದ್ರ ಸರ್ಕಾರ ಎಂಟು ಸದಸ್ಯರ ಉನ್ನತ ಹಂತದ ಸಮಿತಿ ರಚಿಸಿದೆ.

ಸಮಿತಿಗೆ ಮಾಜಿ ರಾಷ್ಟ್ರಪತಿ ರಾಮ ನಾಥ ಕೋವಿಂದ್ ಅಧ್ಯಕ್ಷರಾಗಿದ್ದಾರೆ. ಈ ಸಮಿತಿಯಲ್ಲಿ ಗೃಹ ಸಚಿವ ಅಮಿತ್ ಷಾ, ಲೋಕಸಭೆಯಲ್ಲಿ ಕಾಂಗ್ರೆಸ್ (5ನೇ ಪುಟಕ್ಕೆ)

## ರಾಜ್ಯ ಮಟ್ಟದ ಶಿಕ್ಷಕರ ಪ್ರಶಸ್ತಿ ಪ್ರಕಟ

### ಬಸವನಕೋಟೆ ಶಾಲಾ ಶಿಕ್ಷಕ ಬಿ.ಕೆ. ಸತೀಶ್‌ಗೆ ಪ್ರಶಸ್ತಿ

ಬೆಂಗಳೂರು, ಸೆ. 2 - 2023-24 ನೇ ಸಾಲಿನ ರಾಜ್ಯಮಟ್ಟದ ಉತ್ತಮ ಶಿಕ್ಷಕರ ಪ್ರಶಸ್ತಿಗಾಗಿ 31 ಶಿಕ್ಷಕರನ್ನು ಆಯ್ಕೆ ಮಾಡಲಾಗಿದೆ.

ಪ್ರಾಥಮಿಕ ಶಾಲಾ ವಿಭಾಗದಲ್ಲಿ ದಾವಣಗೆರೆ ಜಿಲ್ಲೆ ಜಗಳೂರು ತಾಲ್ಲೂಕು ಬಸವನ ಕೋಟೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಬಿ.ಕೆ. ಸತೀಶ್ ಪ್ರಶಸ್ತಿ ಪಡೆದಿದ್ದಾರೆ.

ಪ್ರಾಥಮಿಕ ಶಾಲಾ ವಿಭಾಗದಿಂದ 20 ಶಿಕ್ಷಕರು ಮತ್ತು ಪ್ರೌಢಶಾಲಾ ವಿಭಾಗದಿಂದ 11 ಶಿಕ್ಷಕರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಸೆಪ್ಟೆಂಬರ್ 5, ಶಿಕ್ಷಕರ ದಿನದಂದು ಉತ್ತಮ ಶಿಕ್ಷಕ ಪ್ರಶಸ್ತಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರದಾನ ಮಾಡಲಿದ್ದಾರೆ.

**ಪ್ರಾಥಮಿಕ ಶಾಲಾ ಶಿಕ್ಷಕರು :** ಶಿವಮೊಗ್ಗದ ಫೌಜಿಯ ಸರವತ್, ಚಿಕ್ಕಬಳ್ಳಾಪುರದ ಮಂಜುನಾಥ್, ದಾವಣಗೆರೆಯ ಬಿ.ಕೆ.ಸತೀಶ್, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಎಂ. ಜಿ.ಸುಜಾತ, ವಿಜಯಪುರದ ಮಹಮ್ಮದ ಹಾಶೀಮಸಾಬ ಹುಸೇನಸಾಬ ಲಷ್ಕರಿ, ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಯ ಪ್ರತಾಪ ಶಂಕರ ಜೋಡಟ್ಟಿ, ಬಾಗಲಕೋಟೆಯ ಮೊಹಮದ್ ಹುಸೇನ ಅಬ್ದುಲ್ ಖಾದರ (2ನೇ ಪುಟಕ್ಕೆ)

## ಪದವಿ ಪತ್ರಗಳಿಗೆ ಆಧಾರ್ ಬೇಡ

ನವದೆಹಲಿ, ಸೆ. 2 – ವಿದ್ಯಾರ್ಥಿಗಳ ಪದವಿ ಹಾಗೂ ಪ್ರಮಾಣ ಪತ್ರಗಳ ಮೇಲೆ ಆಧಾರ್ ಸಂಖ್ಯೆ ನಮೂದಿಸಬಾರದು ಎಂದು ವಿಶ್ವವಿದ್ಯಾಲಯ ಧನ ಸಹಾಯ ಆಯೋಗ (ಯು.ಜಿ.ಸಿ.) ತಿಳಿಸಿದೆ.

ವಿಶ್ವವಿದ್ಯಾನಿಲಯಗಳಿಗೆ ಈ ಬಗ್ಗೆ ಸೂಚನೆ ನೀಡಲಾಗಿದೆ. ನಿಯಮಗಳ ಪ್ರಕಾರ ಆಧಾರ್ ಸಂಖ್ಯೆಯನ್ನು ಸಾರ್ವಜನಿಕವಾಗಿ ಪ್ರಕಟಿಸುವಂತಿಲ್ಲ ಎಂದು ತಿಳಿಸಲಾಗಿದೆ.


ಪ್ರಥಮ ವರ್ಷದ ಪುಣ್ಯಸ್ಮರಣೆ



ಶ್ರೀಮತಿ ಹೇಮಾವತಿ (ಹನುಮಕ್ಕ)
(ಶ್ರೀ ಜಿ.ಡಿ. ಕೊಟಗಿಮನಿ ಇವರ ಧರ್ಮಪತ್ನಿ)
ಶಿವಕುಮಾರಸ್ವಾಮಿ ಬಡಾವಣೆ, ದಾವಣಗೆರೆ.

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು...
ನಿಮ್ಮ ಸವಿ ನೆನಪು ನಮ್ಮ ಮನದಲ್ಲಿ ಸದಾ ನಲಿದಾಡುತ್ತಿದೆ
ನಿಮ್ಮ ದಿವ್ಯ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ಅನುಗ್ರಹಿಸಲಿ
ಎಂದು ಪ್ರಾರ್ಥಿಸುತ್ತಾ ಅನುದಿನವೂ ನಿಮ್ಮನ್ನು ಸ್ಮರಿಸುವವರು...

ಶ್ರೀ ಜಿ.ಡಿ. ಕೊಟಗಿಮನಿ ಮತ್ತು ಮಕ್ಕಳು
ಹಾಗೂ ಕುಟುಂಬ ವರ್ಗದವರು ಮತ್ತು ಬಂಧು-ಮಿತ್ರರು.

ಪುಣ್ಯಸ್ಮರಣೆ ಕಾರ್ಯಕ್ರಮವನ್ನು ದಿನಾಂಕ : 03.09.2023ರ ಭಾನುವಾರ ಮಧ್ಯಾಹ್ನ 12.00 ಗಂಟೆಗೆ ದಾವಣಗೆರೆ ನಗರದ ಶಿವಕುಮಾರಸ್ವಾಮಿ ಬಡಾವಣೆಯಲ್ಲಿರುವ ನಿವಾಸದಲ್ಲಿ ಹಮ್ಮಿಕೊಳ್ಳಲಾಗಿದೆ.


## ಚಂದ್ರಯಾನದ 'ಸ್ಲೀಪ್'ಗೆ ಸಿದ್ಧತೆ

ಶ್ರೀಹರಿಕೋಟ, ಸೆ. 2 – ಚಂದ್ರಯಾನ -3ರ ರೋವರ್ ಹಾಗೂ ಲ್ಯಾಂಡರ್‌ಗಳು ಉತ್ತಮವಾಗಿ ಕೆಲಸ ಮಾಡುತ್ತಿವೆ. ಚಂದ್ರನಲ್ಲಿ ಉಂಟಾಗುವ ರಾತ್ರಿಯ ಕಠಿಣ ವಾತಾವರಣದಿಂದ ಇವುಗಳನ್ನು ರಕ್ಷಿಸಲು 'ಸ್ಲೀಪ್'ಗೆ ವ್ಯವಸ್ಥೆ ಮಾಡಲಾಗುವುದು ಎಂದು ಇಸ್ರೋ ಅಧ್ಯಕ್ಷ ಎಸ್. ಸೋಮನಾಥ್ ತಿಳಿಸಿದ್ದಾರೆ.

ರೋವರ್ ಈಗ ಲ್ಯಾಂಡರ್‌ನಿಂದ 100 ಮೀಟರ್ ದೂರ ಸಾಗಿದೆ. ನಾವು ಎರಡು, ಮೂರು ದಿನಗಳಲ್ಲಿ ಎರಡೂ ಉಪಕರಣಗಳನ್ನು ಸ್ಲೀಪ್‌ಗೆ ಹಾಕಲಿದ್ದೇವೆ. ಇದರಿಂದ ಅವುಗಳು ರಾತ್ರಿ ತಡೆದುಕೊಳ್ಳಲು ಸಾಧ್ಯವಾಗಲಿದೆ ಎಂದು ಸೋಮನಾಥ್ ತಿಳಿಸಿದ್ದಾರೆ.

## ಖಗೋಳಶಾಸ್ತ್ರ ಅಧ್ಯಯನದೆಡೆ ಇಸ್ರೋ ಹೆಜ್ಜೆ

ಬೆಂಗಳೂರು ಸೆ. 2- ಚಂದ್ರಯಾನ ಹಾಗೂ ಸೂರ್ಯಯಾನಗಳ ನಂತರ ಭಾರತೀಯ ಬಾಹ್ಯಾಕಾಶ ಸಂಸ್ಥೆಯಾದ ಇಸ್ರೋ, ಖಗೋಳ ಶಾಸ್ತ್ರದಲ್ಲಿ ಹೆಚ್ಚಿನ ಜ್ಞಾನ ಪಡೆಯುವತ್ತ ಹೆಜ್ಜೆ ಹಾಕಿದೆ. ಮುಂದಿನ ದಿನಗಳಲ್ಲಿ ಎಕ್ಸ್‌ಪೋ ಸ್ಯಾಟ್ (ಎಕ್ಸ್-ರೇ ಪೋಲಾರ್ ಮೀಟರ್ ಸೆಟಲೈಟ್) ಉಡಾವಣೆ ಮಾಡಲಾಗುವುದು. ಇದು ತೀವ್ರ ಪರಿಸ್ಥಿತಿಯಲ್ಲಿ ಕಂಡು ಬರುವ ಕಿರಣಗಳ ಅಧ್ಯಯನ ನಡೆಸಲಿದೆ.

ಕಪ್ಪು ಕುಳಿ, ನ್ಯೂಟ್ರಾನ್ ತಾರೆಗಳು ಸೇರಿದಂತೆ, ಹಲವು ವಿಸ್ಮಯಕಾರಿ ಆಕಾಶಕಾಯಗಳ ಅಧ್ಯಯನಕ್ಕೆ ಈ ಉಪಗ್ರಹ ನೆರವಾಗಲಿದೆ.




• 10 am to 8 pm • Open All Days • Master / Visa Card Accepted
INNERWEAR • LEISUREWEAR • ACTIVEWEAR • KIDSWEAR • SOCKS
Venue In Davangere
IInd Main P.J Extension
Akmadevi Kalyana Mandapam (Smt. Mothi Channabasamma Veerappa Kalyana Mandapam), Opp. AVK College - 577002
Org. by: Surya Agency Pvt. Ltd.



ವಿದೇಶ ಪ್ರಯಾಣ-ಶುಭ ಹಾರೈಕೆಗಳು



ಅಕ್ಷತ ಎಂ. ಎಸ್.
ಸಾಫ್ಟ್‌ವೇರ್ ಇಂಜಿನಿಯರ್
ಇವರ ಕಾರ್ಯದಕ್ಷತೆ ಗುರುತಿಸಿ ಸೀನಿಯರ್ ಸಾಫ್ಟ್‌ವೇರ್ ಡೆವಲಪರ್ ಇಂಜಿನಿಯರ್‌ಆಗಿ ಕಾರ್ಯನಿರ್ವಹಿಸಲು ಕಂಪನಿಯ ವತಿಯಿಂದ ದಿನಾಂಕ: 3.9.2023ರ ಭಾನುವಾರ ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ದುಬೈ ಮಾರ್ಗವಾಗಿ ಯುರೋಪ್ ಖಂಡದ ನಾರ್ವೆ ದೇಶಕ್ಕೆ ಪ್ರಯಾಣಿಸಲಿದ್ದಾರೆ.

ಅಕ್ಷತ ಇವರ ಪ್ರಯಾಣ ಸುಕರವಾಗಿರಲೆಂದು ಶುಭ ಹಾರೈಸುವವರು ...
ಪತಿ : ಸಂದೀಪ್ ಕುಮಾರ್, ಸಾಫ್ಟ್‌ವೇರ್ ಇಂಜಿನಿಯರ್ ಬೆಂಗಳೂರು.
ಮಗಳು : ಸಮನ್ವಿ, ತಂದೆ-ತಾಯಿ: ಎಸ್.ಎಚ್. ಮಂಜೇಶ್ವರಿ, ಶಿಕ್ಷಕರು ಸುರೇಶ್, ಡಿಸಿಎಂ ಟೌನ್‌ಶಿಪ್, ದಾವಣಗೆರೆ.
ರಂಜಿತ ಭರತ್, ಸಾಫ್ಟ್‌ವೇರ್ ಇಂಜಿನಿಯರ್, ಪ್ರತೀಕ್ಷ, ಬೆಂಗಳೂರು.
ಅತ್ತೆ -ಮಾವ : ಪಾರ್ವತಿ, ಆನಂದಪ್ಪ, ಬೆಸ್ಕಾಂ, ಬಳ್ಳಾರಿ.
ಹಾಗೂ ಮಡಿವಾಳ ಸಮಾಜ ಬಾಂಧವರು ಮತ್ತು ಬಂಧು-ಮಿತ್ರರು



MISS TEEN MALNAD 2023
ಪುರಸ್ಕೃತೆಗೆ ಅಭಿನಂದನೆಗಳು



ಶ್ರೀಮತಿ ರಶ್ಮಿ ಮತ್ತು ಶ್ರೀ ಭರತ್ ಎಸ್. ಚನ್ನಗಿರಿ
ಇವರ ಪುತ್ರಿ
ದಾವಣಗೆರೆಯ R.G. INSTITUTE ನ
ದ್ವಿತೀಯ BBA ವಿದ್ಯಾರ್ಥಿನಿ
ನೇಹಾ ಚನ್ನಗಿರಿ
(ಶ್ರೀಮತಿ ದೇವಲೀಲಾ ಮತ್ತು ಶ್ರೀ ಚನ್ನಗಿರಿ ಸತ್ಯನಾರಾಯಣ ಹಾಗೂ ಶ್ರೀಮತಿ ವಿಜಯಲಕ್ಷ್ಮಿ ಮತ್ತು ಶ್ರೀ ಗೋವಿಂದರಾಜ್ ಗುಪ್ತ ಇವರ ಮೊಮ್ಮಗಳು)
ದಿನಾಂಕ : 27–08–2023ರಂದು ಚಿಕ್ಕಮಗಳೂರಿನಲ್ಲಿ ನಡೆದ
UP'S MODEL MANAGEMENT
Mr-Mrs-Miss-Teen Malnad 2023 ಸ್ಪರ್ಧೆಯಲ್ಲಿ ಸ್ಪರ್ಧಿಸಿ,
MISS TEEN MALNAD 2023
ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆಯುವ ಮೂಲಕ
ಕು|| ನೇಹಾ ಚನ್ನಗಿರಿ @neha_channagiri
ಇವರು ದಾವಣಗೆರೆ ನಗರಕ್ಕೆ ಕೀರ್ತಿಯನ್ನು ತಂದಿರುತ್ತಾರೆ.
RM RANGA MAHAL, DAVANAGERE.



ವಿದೇಶ ಪ್ರಯಾಣ ಶುಭ ಹಾರೈಕೆಗಳು



ದಾವಣಗೆರೆ ಚೌಕಿಪೇಟೆಯ ಶ್ರೀ ಕಲ್ಯಾಣ ಬಸವೇಶ್ವರ ಟ್ರೇಡರ್ಸ್‌ನ ಮಾಲೀಕರಾದ ಶ್ರೀಮತಿ ಮಮತ ವಿಶ್ವನಾಥ್ ಮತ್ತು ಶ್ರೀ ವಿಶ್ವನಾಥ್ ಇವರ ಸುಪುತ್ರ
ಸೂರಜ್ ಕೆ.ಎಂ.ವಿ.
ದಿನಾಂಕ 04.09.2023ರಂದು ಹೆಚ್ಚಿನ ವ್ಯಾಸಂಗಕ್ಕಾಗಿ MSc., Aerospace ಇಂಜಿನಿಯರಿಂಗ್‌ಗಾಗಿ ಯುರೋಪ್ ಖಂಡದ ಫ್ರಾನ್ಸ್ ದೇಶದ ಪ್ಯಾರಿಸ್ ನಗರಕ್ಕೆ ಪ್ರಯಾಣ ಬೆಳೆಸಿರುತ್ತಾರೆ. ಅವರ ವಿದ್ಯಾಭ್ಯಾಸ ಯಶಸ್ವಿಯಾಗಲೆಂದು ಶುಭ ಹಾರೈಸುವವರು.
ತಂದೆ: ಶ್ರೀ ವಿಶ್ವನಾಥ್ ಕೆ.ಎಂ.
ತಾಯಿ: ಶ್ರೀಮತಿ ಮಮತ ವಿಶ್ವನಾಥ್
ಅಕ್ಕ: ಸ್ಪಂದನ ಕೆ.ಎಂ.ವಿ.,
ಶ್ರೀ ಕಲ್ಯಾಣ ಬಸವೇಶ್ವರ ಟ್ರೇಡರ್ಸ್, ಚೌಕಿಪೇಟೆ, ದಾವಣಗೆರೆ.
ಮತ್ತು ಬಂಧು-ಮಿತ್ರರು.



ಪ್ರಥಮ ವರ್ಷದ ಪುಣ್ಯಸ್ಮರಣೆ



ಲಿಂ|| ಶ್ರೀ ಹವಳದ ಮೌನೇಶಪ್ಪ
ನಿಧನ : 03.09.2022

ಸರ್ವರಿಗೂ ಸಮಪಾಲು, ಸರ್ವರಿಗೆ ಸಮಬಾಳು ಎಂಬ ಕಲ್ಪನೆಯೊಂದಿಗೆ ಕಾಯಕವೇ ಕೈಲಾಸವೆಂಬ ತತ್ವದೊಂದಿಗೆ ನಮ್ಮ ಮನೆ - ಮನಗಳಲ್ಲಿ ದೀಪ ಮುಡಿಸಿ, ಶಿಸ್ತು-ಸಂಸ್ಕೃತಿ-ಸಂಸ್ಕಾರ ಕಲಿಸಿದ್ದೀರಿ. ನಮಗೆ ನೀಡಿದ ಮಮಕಾರ, ಪ್ರೀತಿ-ವಾತ್ಸಲ್ಯಕ್ಕಾಗಿ ನಾವು ಸದಾ ಚಿರಋಣಿ.

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು.
ಭಗವಂತನು ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಬೇಡುವ.

ಪತ್ನಿ : ಶ್ರೀಮತಿ ಅನ್ನಪೂರ್ಣಮ್ಮ
ಮಕ್ಕಳಾದ : ವಿಶ್ವನಾಥ್ ಹೆಚ್.ಎಂ. ಮತ್ತು ಶ್ರೀಮತಿ ಅಮಿತಾ ಶಿವಶಂಕರಪ್ಪ ಹೆಚ್.ಎಂ., ಶಿವಾನಂದ ಹೆಚ್.ಎಂ.
ಮೊಮ್ಮಗಳು : ಸಹನಾ ಹಾಗೂ ಹವಳದ ವಂಶಸ್ಥರು, ಬಂಧು-ಮಿತ್ರರು.

# ಬಿಜೆಪಿ ಸಂಸದರಿಗೆ ಕಾಂಗ್ರೆಸ್ ಗಾಳ

ಬೆಂಗಳೂರು, ಸೆ.2 - ಕೇಂದ್ರದ ಮಾಜಿ ಸಚಿವ ರಮೇಶ್ ಜಿಗಜಿಣಗಿ ಸೇರಿದಂತೆ, ಬಿಜೆಪಿಯ 7 ಸಂಸದರನ್ನು ಕಾಂಗ್ರೆಸ್ ಆಪರೇಷನ್ ಹಸ್ತಾಕ್ಕೆ ಮುಂದಾಗಿದೆ ಎಂಬ ಮಾತುಗಳು ರಾಜಕೀಯ ವಲಯದಲ್ಲಿ ಕೇಳಿ ಬರುತ್ತಿವೆ.

ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಕಣಕ್ಕಿಳಿಯಲು ಆಸಕ್ತಿ ಇಲ್ಲದ ಹಾಗೂ ಚುನಾವಣಾ ಟಿಕೆಟ್ ತಪ್ಪಲಿದೆ ಎಂಬ ಸಂದಿಗ್ಧತೆಯಲ್ಲಿರುವವರಿಗೆ ಕಾಂಗ್ರೆಸ್ ಗಾಳ ಹಾಕಿದೆ. ವಿಧಾನಸಭೆಯ ಬಿಜೆಪಿ ಶಾಸಕರನ್ನು ಸೆಳೆಯಲು ವೇದಿಕೆ ಸಿದ್ಧಪಡಿಸಿರುವ ಕಾಂಗ್ರೆಸ್ ಆ ಪಕ್ಷದ ಸಂಸದರನ್ನು ಸೆಳೆದು ಚುನಾವಣೆಗೆ ಈಗಿನಿಂದಲೇ ಅಲೆ ಸೃಷ್ಟಿಗೆ ಮುಂದಾಗಿದೆ.

ರಮೇಶ್ ಜಿಗಜಿಣಗಿ ಅವರಲ್ಲದೆ, ಬಸವರಾಜ್ (ತುಮಕೂರು), ಕರಡಿ ಸಂಗಣ್ಣ (ಕೊಪ್ಪಳ), ಬಿ.ಎನ್. ಬಚ್ಚೇಗೌಡ (ಚಿಕ್ಕಬಳ್ಳಾಪುರ), ಮಂಗಳ ಸುರೇಶ್ ಅಂಗಡಿ (ಬೆಳಗಾವಿ), ಪಿ.ಸಿ.ಗದ್ದಿಗೌಡರ್ (ಬಾಗಲಕೋಟೆ), ರಾಜ ಅಮರೇಶ್‌ನಾಯಕ್(ರಾಯಚೂರು) ಅವರನ್ನು ಆಪರೇಷನ್ ಹಸ್ತಾ ಮಾಡಲು ಈಗಾಗಲೇ ವೇದಿಕೆ ಸಿದ್ಧಗೊಂಡಿದೆ.

ಬಚ್ಚೇಗೌಡ, ಮಂಗಳ ಸುರೇಶ್ ಅಂಗಡಿ, ಬಸವರಾಜ್ ಸೇರಿದಂತೆ ಕೆಲವರಿಗೆ ಚುನಾವಣೆಯಲ್ಲಿ ಸ್ಪರ್ಧಿಸಲು ಬಿಜೆಪಿ ಅವಕಾಶ ನೀಡುತ್ತಿಲ್ಲ. ಅಲ್ಲದೆ, ಕೆಲವರಿಗೆ ಟಿಕೆಟ್ ನೀಡಲು ಬಿಜೆಪಿ ನಿಯಮಗಳ ಪ್ರಕಾರ ಅವಕಾಶವಿಲ್ಲ. ವಯೋಮಿತಿ ಹೆಚ್ಚಾಗಿದೆ.

ಮತ್ತೆ ಕೆಲವರು ಕೇಂದ್ರದ ವರಿಷ್ಠರೊಂದಿಗೆ ಸಂಬಂಧ ಚೆನ್ನಾಗಿಟ್ಟುಕೊಂಡಿಲ್ಲ. ಇಂಥವರಿಗೆ ಮತ್ತೆ ಸ್ಪರ್ಧೆಗೆ ಅವಕಾಶವಿಲ್ಲ ಎಂಬುದು ಸೇರಿದಂತೆ ವಿವಿಧ ಕಾರಣಗಳಿಗೆ ಬಿಜೆಪಿ ತೊರೆಯಲು ಇವರು ಮುಂದಾಗಿದ್ದಾರೆ ಎನ್ನಲಾಗುತ್ತಿದೆ. ಈಗಾಗಲೇ ಬಚ್ಚೇಗೌಡರ ಪುತ್ರ ಶರತ್‌ಬಚ್ಚೇಗೌಡ ಕಾಂಗ್ರೆಸ್ ಚಿಹ್ನೆಯಡಿ ವಿಧಾನಸಭಾ ಪ್ರವೇಶಿಸಿದ್ದಾರೆ. ಇನ್ನೂ ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಅವರ ಸಂಬಂಧಿಯಾಗಿರುವ ಮಂಗಳ ಸುರೇಶ್ ಅಂಗಡಿ ಅವರೂ, ಸಹ ಶೆಟ್ಟರ್ ಅವರ ಹಾದಿಯನ್ನು ತುಳಿಯಲಿದ್ದಾರೆ.

ವಿಧಾನಸಭೆಯಲ್ಲಿ ಸೋಲುಂಡ ಮಾಜಿ ಉಪ ಮುಖ್ಯಮಂತ್ರಿ ಗೋವಿಂದ ಕಾರಜೋಳ ಅವರು, ವಿಜಯಪುರ ಲೋಕಸಭಾ ಕ್ಷೇತ್ರದಿಂದ ಕಣಕ್ಕಿಳಿಯಲು ಆಸಕ್ತಿ ತೋರಿದ್ದಾರೆ.

ಇವರು ವರಿಷ್ಠರೊಂದಿಗೆ ಒಳ್ಳೆಯ ಬಾಂಧವ್ಯ ಇಟ್ಟುಕೊಂಡಿದ್ದಾರೆ. ಜಿಗಜಿಣಗಿಗೆ ಟಿಕೆಟ್ ತಪ್ಪಬಹುದು ಎಂಬ ಸುಳಿವು ದೊರೆತಿದೆ. ಈ ಹಿನ್ನೆಲೆಯಲ್ಲಿ ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಅವರು ಮುಂಬೈ ಕರ್ನಾಟಕ ಭಾಗದಲ್ಲಿ ಕೆಲವರನ್ನು ಸೆಳೆಯಲು ಪ್ರಮುಖ ಪಾತ್ರ ವಹಿಸಿದ್ದಾರೆ. ಇನ್ನೂ ತುಮಕೂರಿನಲ್ಲಿ ಬಸವರಾಜ್ ಅವರಿಗೆ ವಯೋಮಿತಿ ಹೆಚ್ಚಾಗಿದೆ ಎಂಬ ಕಾರಣಕ್ಕೆ ಟಿಕೆಟ್ ದೊರೆಯುವುದಿಲ್ಲ. ಅಲ್ಲಿ ಮಾಜಿ ಸಚಿವ ವಿ.ಸೋಮಣ್ಣ ಅವರನ್ನು ಕಣಕ್ಕಿಳಿಸಲು ಬಿಜೆಪಿ ಆಸಕ್ತಿ ತೋರಿದೆ. ಸೋಮಣ್ಣ ಕಣಕ್ಕಿಳಿದರೆ, ಬಸವರಾಜ್ ಕೂಡ ಬೆಂಬಲಿಸುತ್ತಾರೆ. ಆದರೆ, ಸೋಮಣ್ಣ ಅವರನ್ನು ಕಾಂಗ್ರೆಸ್‌ಗೆ ಸೆಳೆದು ಅದೇ ಕ್ಷೇತ್ರದಿಂದ ಕಣಕ್ಕಿಳಿಸಲು ಕಾಂಗ್ರೆಸ್ ನಾಯಕರು ಮುಂದಾಗಿದ್ದಾರೆ.

ಇನ್ನೂ ಗದ್ದಿಗೌಡರ್ ಹಾಗೂ ಕರಡಿ ಸಂಗಣ್ಣ ಅವರು ಬಿಜೆಪಿಯ ಪ್ರಮುಖರೊಂದಿಗೆ ಅಂತಹ ಒಳ್ಳೆಯ ಸಂಬಂಧ ಉಳಿಸಿಕೊಂಡಿಲ್ಲ. ಈಗಾಗಲೇ ಹಲವು ಬಾರಿ ಅಪಸ್ವರ ಎತ್ತಿದ್ದಾರೆ. ಇಂಥವರನ್ನು ಗುರುತಿಸಿ, ಪಕ್ಷಕ್ಕೆ ಸೆಳೆದುಕೊಂಡು ಅಲೆ ಸೃಷ್ಟಿಸಲು ಕಾಂಗ್ರೆಸ್ ಹೊರಟಿದೆ. ಕೆಲವು ಲೋಕಸಭಾ ಕ್ಷೇತ್ರಗಳಿಗೆ ಆಡಳಿತಾರೂಢ ಕಾಂಗ್ರೆಸ್‌ಗೆ ಸಮರ್ಥ ಅಭ್ಯರ್ಥಿಗಳಿಲ್ಲ. ಇಂತಹ ಕ್ಷೇತ್ರಗಳಿಗೆ ಬಿಜೆಪಿ ಇಲ್ಲವೇ ಜೆಡಿಎಸ್ ಮುಖಂಡರನ್ನು ಸೆಳೆದು ಪಕ್ಷದಿಂದ ಕಣಕಿಳಿಸಲು ಕಾಂಗ್ರೆಸ್ ಹೊರಟಿದೆ.

ವಿಧಾನಸಭಾ ಹಾಗೂ ಲೋಕಸಭೆಯ ಶಾಸಕ ಹಾಗೂ ಸಂಸದರನ್ನು ಆಪರೇಷನ್ ಹಸ್ತಾ ಮಾಡಲು ತೆರೆಮರೆಯಲ್ಲಿ ಹಲವು ಸುತ್ತಿನ ಚರ್ಚೆಗಳೇ ನಡೆದಿವೆ.

ಇದರಲ್ಲಿ ಈಗಾಗಲೇ ಕೆಲವರಲ್ಲಿ ಯಶಸ್ಸು ಕಂಡಿರುವ ಕಾಂಗ್ರೆಸ್ ಮತ್ತೆ ಕೆಲವರಿಗೆ ಗಾಳ ಹಾಕಲು ಮುಂದಾಗಿದೆ. ಕಳೆದ ವಿಧಾನಸಭೆಯಲ್ಲಿ ಪಕ್ಷಕ್ಕೆ ಬಂದಿರುವ ಶೇಕಡಾವಾರು ಮತ ಸಂಖ್ಯೆಗಿಂತ ಲೋಕಸಭಾ ಚುನಾವಣೆಯಲ್ಲಿ ಶೇ.5ರಷ್ಟು ಹೆಚ್ಚು ಮತ ಪಡೆದರೆ ತಮ್ಮ ಗುರಿ 20 ಸ್ಥಾನಗಳನ್ನು ಮುಟ್ಟಬಹುದಾಗಿದೆ ಎಂಬುದು ಕಾಂಗ್ರೆಸ್ ಲೆಕ್ಕಾಚಾರ ಎನ್ನಲಾಗಿದೆ.

## ಮಲೇಬೆನ್ನೂರಿನಲ್ಲಿ ಇಂದು ಹಂದರ ಕಂಬದ ಪೂಜೆ

ನೀರಾವರಿ ಇಲಾಖೆಯ ಆವರಣದಲ್ಲಿ ಇದೇ ದಿನಾಂಕ 18 ರಂದು 2 ನೇ ವರ್ಷದ ಹಿಂದೂ ಮಹಾಗಣಪತಿ ಪ್ರತಿಷ್ಠಾಪನೆ ಅಂಗವಾಗಿ ಇಂದು ಬೆಳಿಗ್ಗೆ 10.30 ಕ್ಕೆ ಗೋ ಪೂಜೆಯೊಂದಿಗೆ ಹಂದರ ಕಂಬದ ಪೂಜೆ ನಡೆಯಲಿದೆ.

ಬೆಳಿಗ್ಗೆ 8.30 ಕ್ಕೆ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಧ್ವಜ ಪೂಜೆ ಮಾಡಿಸಿ ನಂತರ ನೀರಾವರಿ ಇಲಾಖೆಯ ಆವರಣಕ್ಕೆ ಬೈಕ್ ರ‍್ಯಾಲಿಯೊಂದಿಗೆ ತರಲಾಗುವುದು.

# ನೀರು, ವಿದ್ಯುತ್ ಸಮಸ್ಯೆಗಳ ನಿಗಾ



(1ನೇ ಪುಟದಿಂದ) ನಿರ್ವಹಿಸಬೇಕು ಎಂದು ತಿಳಿಸಿದರು. ದರ್ಗಾ ಮುಂದಿನ ರಸ್ತೆ ದುರಸ್ತಿ ಆಗಬೇಕಿದೆ. ಸರ್ವೇ ಪ್ರಕಾರ ದರ್ಗಾದ ಜಾಗವನ್ನು ಗುರುತಿಸಿ. ಮುಂದಿನ ವಾರದಲ್ಲೇ ರಸ್ತೆ ಕಾಮಗಾರಿಗೆ ಶಂಕು ಸ್ಥಾಪನೆ ಮಾಡಿ ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಹೊರಗಡೆ ಔಷಧಿ ಖರೀದಿಸಲು ಸರ್ಕಾರಿ ಆಸ್ಪತ್ರೆಗಳಲ್ಲಿ ಚೀಟಿ ಬರೆದು ಕೊಡುವುದು ರೂಢಿಯಾಗಿದೆ. ಈ ಬಗ್ಗೆ ಸಾರ್ವಜನಿಕರು ಸಾಕಷ್ಟು ದೂರಿದ್ದಾರೆ. ಸರ್ಕಾರದಿಂದ ಸರಬರಾಜಾಗುವ ದಾಸ್ತಾನು ಏನಾಗುತ್ತಿದೆ ಎಂಬುದನ್ನು ಗಮನಿಸಿ ಎಂದು ಹೇಳಿದರು.

ತ್ರೈಮಾಸಿಕ ಸಭೆಗೆ ಕೆಲ ಅಧಿಕಾರಿಗಳು ಗೈರಾಗಿದ್ದಾರೆ. ಇನ್ನು ಕೆಲವರು ಮಾಹಿತಿ ಇಲ್ಲದೇ ಬಂದಿದ್ದಾರೆ. ಈ ರೀತಿಯ ವರ್ತನೆ ಸರಿಯಲ್ಲ. ಮುಂದಿನ ಸಭೆಯಲ್ಲಿ ಇಲಾಖೆಯ ಸಂಪೂರ್ಣ ಮಾಹಿತಿಯೊಂದಿಗೆ ಬರಬೇಕು ಎಂದು ಶಾಸಕರು ತಿಳಿಸಿದರು.

ತಾಲ್ಲೂಕು ಪಂಚಾಯ್ತಿ ಇ.ಓ. ಎನ್. ರವಿ ಮಾತನಾಡಿ, ಭಾನುವಳ್ಳಿ ಮತ್ತು ಸಿರಿಗೆರೆ ಗ್ರಾಮಗಳ ಮಾತ್ರ ಸ್ವಲ್ಪ ಮಟ್ಟಿಗೆ ಕುಡಿಯುವ ನೀರಿನ ಸರಬರಾಜು ತೊಂದರೆ ಇದೆ ಎಂದು ಹೇಳಿದರು.

ತಹಶೀಲ್ದಾರ್ ಪೃಥ್ವಿ ಸಾನಿಕಂ ಮಾತನಾಡಿ, ಬೆಳೆ ಹಾನಿ ಬಗ್ಗೆ ಸರ್ಕಾರಕ್ಕೆ ಸಂಪೂರ್ಣ ವರದಿ ಕಳಿಸಲಾಗಿದೆ. ಸೆ.4ರಂದು ತಾಲ್ಲೂಕನ್ನು ಬರ ಪ್ರದೇಶ ಎಂದು ಸರ್ಕಾರ ಘೋಷಣೆ ಮಾಡುವ ಸಾಧ್ಯತೆ ಇದೆ. ನಂತರ ಪರಿಹಾರ ಬರಲಿದೆ ಎಂದರು.

ಈ ಸಂದರ್ಭದಲ್ಲಿ ವಿವಿಧ ಇಲಾಖೆ ಅಧಿಕಾರಿಗಳಾದ ಕೃಷಿ ಇಲಾಖೆ ನಾರನಗೌಡ್ರು, ಲೋಕೋಪಯೋಗಿ ಇಲಾಖೆಯ ಶಿವಮೂರ್ತಿ, ಹಿಂದುಳಿದ ವರ್ಗಗಳ ಇಲಾಖೆ ನುಸ್ರತ್ ಬಾನು, ಪಂಚಾಯತ್ ರಾಜ್ ಇಲಾಖೆ ಗಿರೀಶ್, ಸಿಡಿಪಿಓ ಪೂರ್ಣಿಮಾ, ಆರೋಗ್ಯ ಇಲಾಖೆ ಚಂದ್ರಮೋಹನ್, ಸರ್ವೇ ಇಲಾಖೆ ವಿಜಯಪ್ರಕಾಶ್, ಅಬಕಾರಿ ಇಲಾಖೆ ರೇಖಾ ದೇವರಾಜ್, ತಾ.ಪಂ. ಲೆಕ್ಕಾಧಿಕಾರಿ ಲಿಂಗರಾಜ್. ವಿದ್ಯಾವತಿ ಐ.ಸಿ. ಶಿವಶಂಕರ್ ಚಿಕ್ಕಬಿದರಿ ಮತ್ತಿತರರು ಉಪಸ್ಥಿತರಿದ್ದರು.


# ರಾಜ್ಯ ಮಟ್ಟದ ಶಿಕ್ಷಕರ ಪ್ರಶಸ್ತಿ ಪ್ರಕಟ

(1ನೇ ಪುಟದಿಂದ) ಸೌದಾಗರ, ಬೀದರ್‌ನ ಮಾರ್ತಂಡಪ್ಪ ತೆಳಗೇರಿ, ಶಿರಸಿಯ ಅಕ್ಷತಾ ಅನಿಲ ಬಾಸಗೋಡ, ಧಾರವಾಡದ ಶೇಕಪ್ಪ ಭೀಮಪ್ಪ ಕೇಸರಿ, ಮೈಸೂರಿನ ಭಾಸ್ಕರ, ಹಾಸನದ ಎ.ಬಿ. ಮೂರ್ತಿ, ಬಳ್ಳಾರಿಯ ಎಂ.ಆರ್.ವನಜಾಕ್ಷಮ್ಮ, ರಾಯಚೂರಿನ ಸೈಯದಾ ಸಾಜೀದಾ ಫಾತೀಮಾ, ಮಂಡ್ಯದ ಜಿ.ಪ್ರಶಾಂತ, ಚಾಮರಾಜನಗರ ಜಿಲ್ಲೆಯ ವಿ.ವೀರಪ್ಪ, ತುಮಕೂರಿನ ಎಂ.ಜಿ.ಗಂಗಾಧರ, ಕೊಡಗಿನ ಬಿ.ಟಿ.ಪೂರ್ಣೇಶ್, ಉತ್ತರ ಕನ್ನಡದ ಮಂಜುನಾಥ ಹರಿಕಂತ್ರ, ಹಾವೇರಿಯ ಸೋಮಪ್ಪ ಫಕ್ಕೀರಪ್ಪ ಕಠಾರಿ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

**ಪ್ರೌಢ ಶಾಲಾ ಶಿಕ್ಷಕರು :** ಉತ್ತರ ಕನ್ನಡದ ಪ್ರಕಾಶ ನಾಯ್ಕ, ಧಾರವಾಡದ ಸುರೇಶ್ ಬಿ.ಮುಗಳಿ, ಚಿತ್ರದುರ್ಗದ ಕೆ.ಟಿ.ನಾಗಭೂಷಣ್, ಮಧುಗಿರಿಯ ಜಿ.ಹೆಚ್.ರೇಣುಕರಾಜ್, ಮಂಡ್ಯದ ಜಿ.ಸಿ.ರಜನಿ, ಕೊಪ್ಪಳದ ಬಸಪ್ಪ ವಾಲಿಕಾರ, ಬೆಂಗಳೂರಿನ ಪಿ.ಜಿ. ಇಂದಿರಾ, ಶಿವಮೊಗ್ಗದ ವಿಜಯ ಆನಂದರಾವ್, ಮೈಸೂರಿನ ಎಸ್.ಹರ್ಷ, ಉಡುಪಿಯ ನರೇಂದ್ರ, ಚಿಕ್ಕೋಡಿಯ ಶ್ರೀಶೈಲ ಗಸ್ತಿ ಪ್ರಶಸ್ತಿಗೆ ಭಾಜನರಾಗಿದ್ದಾರೆ.

## ಪದವಾಣಿ-78

ರಚನೆ : ಮಮತಾ ರಾಧಾಕೃಷ್ಣ ದಾವಣಗೆರೆ.



**ಎಡದಿಂದ ಬಲಕ್ಕೆ :**

1) ಮಂಕ ಹೊತ್ತು ತಂದ ಬುಟ್ಟಿ 3
3) ದೋಷಿಯಲ್ಲ, ಈಕೆ ಪಂಡಿತೆ 3
5) ಯಕ್ಷಿಣಿ ವಿದ್ಯೆ ಬಲ್ಲವನು 4
7) ಅನುಕಂಪ ಹೀಗೆ ಉಂಟಾಗಿದೆ 4
9) ನಾಲ್ಕಕ್ಷರದ ಕಾರ್ಮಿಕ 4
11) ಯುದ್ಧದಲ್ಲಿ ಬಳಸುವ ದೊಡ್ಡ ನಗಾರಿ 4
13) ಸರ್ಕಾರಕ್ಕೆ ಪಾವತಿಸಬೇಕಾದ ಸುಂಕ 3
14) ಮುಂಗೈಗೆ ಕಟ್ಟುವ ರಕ್ಷಾಸೂತ್ರ 3

**ಮೇಲಿನಿಂದ ಕೆಳಕ್ಕೆ :**

2) ಕರದಲ್ಲಿರುವ ತೆಂಗಿನ ಚಿಪ್ಪು 3
4) ನಿಂದಿಸುವವನು 3
5) ತಿಂಗಳಿಗೊಮ್ಮೆ ಪ್ರಕಟವಾಗುವ ನಿಯತಕಾಲಿಕ 5
6) ರಂ ಶ್ರೀ ಮುಗಳಿಯವರ ಕಾವ್ಯನಾಮ 5
7) ಬಂಗಾರದ ಆಕಾಶದಂತಿರುವ ಪುಷ್ಪ 5
8) ಬೆಳ್ಳಿ ಬೆಟ್ಟ 5
10) ಗೋರಿ ಬಳಿ ಆಡಿದ ಆಟ 3
12) ಮುರಿಯುವಂತದ್ದು 3

(ಉತ್ತರಗಳು ಮುಂದಿನ ವಾರಕ್ಕೆ)

**ಪದವಾಣಿ - 77 ರ ಉತ್ತರಗಳು :**

ಎಡದಿಂದ ಬಲಕ್ಕೆ : 1) ಅತೀಮಧುರ 3) ನದವ (ವದನ) 4) ವಿನೋದ 6) ಮಹಾನದಿ 8) ಮತದಾನ 9) ನವನೀತ 11) ರಸವಾದ 14) ದಾಳಿಂಬ 15) ಧಾವಂತ 16) ರಕ್ಷಾಬಂಧನ.

ಮೇಲಿನಿಂದ ಕೆಳಕ್ಕೆ : 1) ಅವಮಾನ 2) ರವಿಸುತ 3) ನವಮ 5) ದವನ 7) ದಿಗಂತ 8) ಮಯೂರ 9) ನರ್ಮದಾ 10 ನೀಲಾಂಬರ 12) ಸಮಾಧಾನ 13) ದಲಿತ.


WALK IN INTERVIEW

| Sl. No. | Job Title | No Of Openings | Educational Qualification | Experience No of Years |
|---|---|---|---|---|
| 01 | Accountants (Junior) | 10 | B.Com / M.Com / MBA FICO / SAP | 0-1 |
| 02 | Accounts (Senior) | 05 | Bcom / Mcom / MBA GST / INCOME TAX / SAP / FICO | 5 |
| 03 | Sales Executives for marketing retail & Project. with 2-wheeler | 10 | Any Degree (Diploma/ITI) | 0-1 |

HULLUMANE PROPERTIES & POWER PVT LTD.,
# Depot Address - L 13, Lokikere Industrial Area, Opp. Davangere Wire Rope Industry, Lokikere Road, Davangere-577 005. Karnataka
Drop Resume to Email - hrhullumanepropertiespwr@yahoo.com



ವಿಶ್ವಕರ್ಮ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್
ನಂ. 75/1, ತುಳಸಿ ಕಾಂಪ್ಲೆಕ್ಸ್, 1ನೇ ಮಹಡಿ, ವಸಂತ ರಸ್ತೆ, ದಾವಣಗೆರೆ-1
ರಿ.ನಂ.ಎ.ಆರ್. 31, ಆರ್.ಜಿ.ಎನ್. 23240/97-98 ತಾ. 1.7.1997

ದಿನಾಂಕ : 02.09.2023

ಪ್ರತಿಭಾ ಪುರಸ್ಕಾರ

ಸೊಸೈಟಿಯು 2022-23ನೇ ಸಾಲಿಗೆ ತನ್ನ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡುತ್ತಿದ್ದು, 2022-23ನೇ ಸಾಲಿನಲ್ಲಿ ಎಸ್ಸೆಸ್ಸೆಲ್ಸಿಯಲ್ಲಿ ಶೇ. 95ಕ್ಕಿಂತ ಹೆಚ್ಚು ಅಂಕ ಪಡೆದು ತೇರ್ಗಡೆಯಾದ ಹಾಗೂ ಪಿಯುಸಿಯಲ್ಲಿ ಶೇ. 90ಕ್ಕಿಂತ ಹೆಚ್ಚು ಅಂಕ ಪಡೆದು ತೇರ್ಗಡೆಯಾದ ಅರ್ಹ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲು ಆಡಳಿತ ಮಂಡಳಿ ತೀರ್ಮಾನಿಸಿದೆ.

ಆದ್ದರಿಂದ ದಿನಾಂಕ : 12.09.2023ರೊಳಗೆ (ಅರ್ಹ ಸದಸ್ಯರ ಮಕ್ಕಳು) ವಿದ್ಯಾರ್ಥಿಗಳ ಅಂಕಪಟ್ಟಿ, ಆಧಾರ್ ಕಾರ್ಡ್, 2 ಪಾಸ್‌ಪೋರ್ಟ್ ಸೈಜ್ ಫೋಟೋ ಮತ್ತು ಪೋಷಕರ ಸಂಘದ ಸದಸ್ಯತ್ವದ ಗುರುತಿನ ಚೀಟಿಯನ್ನು ಮುಖ್ಯ ಕಛೇರಿಗೆ ಸಲ್ಲಿಸಲು ಸೂಚಿಸಲಾಗಿದೆ.

ಆಯ್ಕೆಯಾದ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ದಿನಾಂಕ : 22.09.2023 ರಂದು ಶ್ರೀ ಚನ್ನಗಿರಿ ವಿರೂಪಾಕ್ಷಪ್ಪ ಧರ್ಮಶಾಲೆ, ಗಡಿಯಾರ ಕಂಬದ ಹತ್ತಿರ, ದಾವಣಗೆರೆ. ಇಲ್ಲಿ ನಡೆಯುವ ಸಂಘದ 26ನೇ ವಾರ್ಷಿಕ ಮಹಾಸಭೆಯಲ್ಲಿ ಸನ್ಮಾನಿಸಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಮೊ.ನಂ. 95908 07050, ದೂರವಾಣಿ ಸಂಖ್ಯೆ 08192 271472ಗೆ ಸಂಪರ್ಕಿಸಿ.

ಸಹಿ/- ಆಡಳಿತ ಮಂಡಳಿ, ವಿಶ್ವಕರ್ಮ ಕ್ರೆಡಿಟ್ ಕೋ-ಆಪ್ ಸೊಸೈಟಿ ಲಿ.,



ಶಿವ ಸಹಕಾರಿ ಬ್ಯಾಂಕ್ ನಿಯಮಿತ
ಆಡಳಿತ ಕಚೇರಿ ಮತ್ತು ಪ್ರಧಾನ ಕಛೇರಿ : ಹಳೇ ಆಸ್ಪತ್ರೆ ರಸ್ತೆ, ದಾವಣಗೆರೆ–577 001.
ಫ್ಯಾಕ್ಸ್ ನಂ. 08192 237488, ದೂರವಾಣಿ ಸಂಖ್ಯೆ : 256107, 255909
E-mail : Shivabank@rediffmail.com

ಮಾನ್ಯ ಸದಸ್ಯರ ಗಮನಕ್ಕೆ

✦ ಬ್ಯಾಂಕಿನ ಸರ್ವ ಸದಸ್ಯರುಗಳ ಗಮನಕ್ಕೆ ಈ ಮೂಲಕ ತಿಳಿಯಪಡಿಸುವುದೇನೆಂದರೆ **ದಿನಾಂಕ 09.09.2023ರ ಶನಿವಾರ ಬೆಳಿಗ್ಗೆ 11.30 ಗಂಟೆಗೆ ಶ್ರೀ ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ಸಮುದಾಯ ಭವನ,** ಮಾಗನೂರು ಬಸಪ್ಪ ರಸ್ತೆ, ದಾವಣಗೆರೆ-5 ಇದರಲ್ಲಿ 2022-23ನೇ ಸಾಲಿನ **49ನೇ ವಾರ್ಷಿಕ ಮಹಾಸಭೆಯನ್ನು** ಏರ್ಪಡಿಸಿದ್ದು, ಎಲ್ಲರೂ ಸಕಾಲಕ್ಕೆ ಭಾಗವಹಿಸಿ, ಯಶಸ್ವಿಗೊಳಿಸಬೇಕಾಗಿ ವಿನಂತಿಸಿಕೊಳ್ಳುತ್ತೇವೆ.

✦ ಇತ್ತೀಚಿನ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆಯ ಪ್ರಕಾರ ಬ್ಯಾಂಕಿನ ಸದಸ್ಯರು ಸಾಮಾನ್ಯ ಸಭೆಗೆ ಹಾಜರಾಗುವುದು ಹಾಗೂ ಬ್ಯಾಂಕಿನ ಕನಿಷ್ಟ ವ್ಯವಹಾರ ಮಾಡುವುದು ಕಡ್ಡಾಯವಾಗಿರುತ್ತದೆ. ಸದಸ್ಯರು ಗೈರು ಹಾಜರಾದಲ್ಲಿ ಮುಂಬರುವ ಬ್ಯಾಂಕಿನ ಚುನಾವಣೆಯಲ್ಲಿ ಭಾಗವಹಿಸುವ ಸ್ಪರ್ಧಿಸುವ ಮತ್ತು ಮತ ನೀಡುವ ಹಕ್ಕನ್ನು ಕಳೆದುಕೊಳ್ಳುತ್ತೀರಿ. ಆದುದರಿಂದ ಎಲ್ಲಾ ಸದಸ್ಯರು ತಪ್ಪದೇ ಮಹಾಸಭೆಗೆ ಹಾಜರಾಗಲು ಹಾಗೂ ಹಾಜರಾತಿ ಪುಸ್ತಕಕ್ಕೆ ಸಹಿ ಮಾಡಲು ಈ ಮೂಲಕ ಕೋರಿದೆ.

✦ ಸಹಕಾರ ಕಾಯ್ದೆ ಪ್ರಕಾರ ಬ್ಯಾಂಕಿನ ವಾರ್ಷಿಕ ಮಹಾಸಭೆಯಲ್ಲಿ ಸದಸ್ಯರು ಭಾಗವಹಿಸಲು **'ಗುರುತಿನ ಚೀಟಿ'** (Identity Card) ಹಾಜರುಪಡಿಸುವುದು ಕಡ್ಡಾಯವಾಗಿರುತ್ತದೆ. ಆದುದರಿಂದ ಗುರುತಿನ ಚೀಟಿಯನ್ನು ಪಡೆಯದ ಮಾನ್ಯ ಸದಸ್ಯರುಗಳ ಬ್ಯಾಂಕಿನ ಮುಖ್ಯ ಕಛೇರಿಯಲ್ಲಿ ಗುರುತಿನ ಚೀಟಿಯನ್ನು ಬ್ಯಾಂಕಿನ ಕೆಲಸದ ವೇಳೆಯಲ್ಲಿ (ಬೆಳಿಗ್ಗೆ 10.30ರಿಂದ ಸಂಜೆ 5.00ರವರೆಗೆ) ಗುರುತಿನ ಚೀಟಿ ಪಡೆಯಬಹುದು.

✦ ವಾರ್ಷಿಕ ಮಹಾಸಭೆಯ ವರದಿ ಪುಸ್ತಕಗಳನ್ನು ಸರ್ವ ಸದಸ್ಯರುಗಳಿಗೆ ಈಗಾಗಲೇ ಅಂಚೆ ಮೂಲಕ ರವಾನಿಸಿರುತ್ತದೆ. ಈ ಪೈಕಿ ಅನೇಕ ವರದಿ ಪುಸ್ತಕಗಳು ವಿಳಾಸ ಸರಿಯಿಲ್ಲವೆಂದು ವಾಪಸ್ಸು ಬಂದಿರುತ್ತವೆ. ಆದ್ದರಿಂದ ಮಾನ್ಯ ಸದಸ್ಯರುಗಳ ವಿಳಾಸ ಬದಲಾಗಿದ್ದಲ್ಲಿ, ದಯವಿಟ್ಟು ಕೂಡಲೇ ಬ್ಯಾಂಕಿನ ಮುಖ್ಯ ಕಛೇರಿಗೆ ಬಂದು ತಮ್ಮ ವಿಳಾಸವನ್ನು ಸರಿಪಡಿಸಿಕೊಳ್ಳಲು ಕೋರಲಾಗಿದೆ.

✦ ವಾರ್ಷಿಕ ಮಹಾಸಭೆಯ ವರದಿ ಪುಸ್ತಕಗಳನ್ನು ಪಡೆಯದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಸಭೆ ಹಾಜರಾಗಲು ವಿನಂತಿಸಿಕೊಳ್ಳಲಾಗಿದೆ.

ಎಂ.ಬಿ. ಸಂಗಮೇಶಗೌಡರು, ಅಧ್ಯಕ್ಷರು — ಐಗೂರು ಸಿ.ಚಂದ್ರಶೇಖರ್, ಉಪಾಧ್ಯಕ್ಷರು — ಡಿ.ಜಿ. ಸುರೇಶ್, ಪ್ರಧಾನ ವ್ಯವಸ್ಥಾಪಕರು


# ರಂಗ ಕಲೆಗೆ ಸದಾ ಪ್ರೋತ್ಸಾಹ : ಲತಾ ಭರವಸೆ



ಹರಪನಹಳ್ಳಿ

ಹರಪನಹಳ್ಳಿ, ಸೆ. 2- ಕಲೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ಸದಾ ಪ್ರೋತ್ಸಾಹಿಸುತ್ತಾ ಬಂದಿದ್ದು, ಮುಂದೆಯೂ ಸಹ ಇಂತಹ ರಂಗ ಕಲೆಗೆ ಸದಾ ಪ್ರೋತ್ಸಾಹ ನೀಡುವುದಾಗಿ ಶಾಸಕರಾದ ಶ್ರೀಮತಿ ಎಂ.ಪಿ. ಲತಾ ಮಲ್ಲಿಕಾರ್ಜುನ್ ತಿಳಿಸಿದರು.

ಪಟ್ಟಣದ ಕಾಶಿ ಸಂಗಮೇಶ್ವರ ಮಠದ ಆವರಣದಲ್ಲಿ ಕತ್ತಲೆ ಬೆಳಕು ಟ್ರಸ್ಟ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಹಯೋಗದಲ್ಲಿ ಕನ್ನಡ ಗಜಲ್, ರಂಗಗೀತೆ ಗಾಯನ ಮತ್ತು ಸೋರುತ್ತಿರುವುದು ಸಂಬಂಧ ನಾಟಕ ಪ್ರದರ್ಶನಕ್ಕೆ ಚಾಲನೆ ನೀಡಿ ಮಾತನಾಡಿದರು.

ನಮ್ಮ ತಂದೆಯವರಾದ ದಿ. ಎಂ.ಪಿ. ಪ್ರಕಾಶ್ ಅವರು ಸ್ವತಃ ಅವರೇ ಸೂರ್ಯ ಶಿಕಾರಿ ನಾಟಕವನ್ನು ಅನುವಾದಿಸಿದ್ದಾರೆ. ನಾಟಕದಲ್ಲಿ ಅಭಿನಯಿಸುತ್ತಾ ಬಂದಿದ್ದು, ಸದಾ ನಾಟಕ, ಜಾನಪದ, ಸಾಂಸ್ಕೃತಿಕ, ಸಾಹಿತ್ಯ ಕ್ಷೇತ್ರದಲ್ಲಿ ತಮ್ಮನ್ನು ತಾವು ಬಿಂಬಿಸಿಕೊಂಡಿದ್ದರು. ನಂತರದ ದಿನಗಳಲ್ಲಿ ಸಹೋದರ ದಿ. ಎಂ.ಪಿ. ರವೀಂದ್ರ ಅವರೂ ಸಹ ಹೂವಿನಹಡಗಲಿಯಲ್ಲಿ ರಂಗಭಾರತಿ ಸಂಸ್ಥೆ ಕಟ್ಟುವ ಮೂಲಕ ಕಲಾವಿದರನ್ನು ಪ್ರೋತ್ಸಾಹಿಸಿ, ಬೆಂಬಲಿಸಿದ್ದಾರೆ. ಅದೇ ರೀತಿಯಾಗಿ ನಾನೂ ಸಹ ವಿವಿಧ ರಾಜ್ಯಗಳಲ್ಲಿನ ಕಲೆಯನ್ನು, ಸ್ಥಳೀಯ ಕಲಾವಿದರನ್ನು ಒಳಗೊಂಡು ಹರಪನಹಳ್ಳಿ ತಾಲ್ಲೂಕಿಗೆ ಪರಿಚಯಿಸಲು ಪ್ರಯತ್ನಿಸುವೆ ಎಂದು ಹೇಳಿದರು.

ಜಿ.ಪಂ. ಮಾಜಿ ಸದಸ್ಯೆ ಸುವರ್ಣ ನಾಗರಾಜ್ ಮಾತನಾಡಿ, ಹಿಂದಿನ ಕಾಲದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ನಾಟಕ, ಜಾನಪದ ಸಂಗೀತದಂತಹ ಕಾರ್ಯಕ್ರಮಗಳು ರಾತ್ರಿ ಪೂರ್ತಿ ನಡೆಯುತ್ತಿದ್ದವು. ಆದರೆ ಇಂದು ಎಲ್ಲರ ಕೈಗೆ ಮೊಬೈಲ್, ಟಿ.ವಿ ಬಂದ ಮೇಲೆ ಅದರ ಆಸಕ್ತಿ ಕಡಿಮೆಯಾಗಿದೆ. ಇದರಿಂದ ವಿವಿಧ ರೀತಿಯ ಕಲಾವಿದರು ತಮ್ಮ ಪ್ರತಿಭೆ ಅನಾವರಣಕ್ಕೆ ವೇದಿಕೆಗಳು ಇಲ್ಲದಂತಾಗಿವೆ ಎಂದು ಬೇಸರ ವ್ಯಕ್ತಪಡಿಸಿದರು.

ರಾಘವ ಕಮ್ಮಾರ ಇವರ ತಂಡದಿಂದ ಕನ್ನಡ ಮಧುರಗೀತೆಗಳು ಮತ್ತು ರಂಗಗೀತೆಗಳ ಗಾಯನ ನಡೆಯಿತು. ಮಂಜು ಸಿರಿಗೆರೆ ಅವರ ತಂಡದಿಂದ ರಾಮದುರ್ಗ ಮಹಾಂತೇಶ್ ಅವರ ರಚನೆಯ ಮತ್ತು ನಿರ್ದೇಶನದ ಸೋರುತ್ತಿರುವುದು ಸಂಬಂಧ ನಾಟಕ ಪ್ರದರ್ಶನ ನೆರೆದಿದ್ದ ಪ್ರೇಕ್ಷಕರ ಮನಸೂರೆಗೊಂಡಿತು.

ಈ ಸಂದರ್ಭದಲ್ಲಿ ಪುರಸಭೆ ಸದಸ್ಯ ಎಂ.ವಿ. ಅಂಜಿನಪ್ಪ, ಪತ್ರಕರ್ತ ರಾಮಪ್ರಸಾದ ಗಾಂಧಿ, ವಕೀಲ ಆರುಂಡಿ ನಾಗರಾಜ, ಶಿಕ್ಷಕ ಎ. ಚನ್ನಪ್ಪ, ನಿಲಯಪಾಲಕ ಎನ್.ಜಿ. ಬಸವರಾಜ, ಪಿ. ಕರಿಬಸಪ್ಪ, ಕತ್ತಲೆ ಬೆಳಕು ಟ್ರಸ್ಟ್ ಅಧ್ಯಕ್ಷ ಅರುಣಕುಮಾರ ಮೇದಾರ, ಉಪಾಧ್ಯಕ್ಷೆ ಟಿ. ಶ್ಯಾಮಲಾ, ಕಾರ್ಯದರ್ಶಿ ಕೆ. ಕಾರ್ತಿಕ, ನವೀನ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಐಪಿಎಸ್ ಅಧಿಕಾರಿಗಳ ವರ್ಗಾವಣೆ

ಬೆಂಗಳೂರು, ಸೆ.2 - ಹತ್ತು ಐಪಿಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಸಿಐಡಿಯಲ್ಲಿ ಪೊಲೀಸ್ ವರಿಷ್ಠಾಧಿ ಕಾರಿಗಳಾಗಿ ಪೃಥ್ವಿಕ್ ಶಂಕರ್ ಹಾಗೂ ಕನ್ನಿಕಾ ಸಿಕ್ರಿವಾಲ್ ಅವರನ್ನು ನೇಮಿಸಲಾಗಿದೆ. ಮಂಗಳೂರು ನಗರ ಡಿಸಿಪಿ (ಕಾನೂನು ಮತ್ತು ಸುವ್ಯವಸ್ಥೆ) ಹುದ್ದೆಗೆ ಸಿದ್ಧಾರ್ಥ ಗೋಯಲ್, ಉಡುಪಿ ಜಿಲ್ಲೆಯ ನಕ್ಸಲ್ ನಿಗ್ರಹ ದಳದ ಎಸ್ಪಿ-ಜಿತೇಂದ್ರ ಕುಮಾರ್ ದಯಾಮ, ಗುಪ್ತಚರ ದಳದ ಎಸ್ಪಿ-ಗುಂಜನ್ ಆರ್ಯ, ಗುಪ್ತಚರ ದಳದ ಎಸ್ಪಿ-ಕೌಶಲ್ ಚೌಕ್ಸೆ ವರ್ಗಾವಣೆಯಾಗಿದ್ದಾರೆ. ಬೆಳಗಾವಿ ನಗರ ಡಿಸಿಪಿ (ಕಾನೂನು ಮತ್ತು ಸುವ್ಯವಸ್ಥೆ)-ರೋಹನ್ ಜಗದೀಶ್, ರಾಜ್ಯ ಮೀಸಲು ಪೊಲೀಸ್ ಪಡೆಯ ಒಂದನೆ ಬೆಟಾಲಿಯನ್‌ನ ಕಮಾಂಡರ್-ಎಂ.ಎನ್.ದೀಪನ್, ಭಯೋತ್ಪಾದನಾ ನಿಗ್ರಹ ಕೇಂದ್ರದ ಎಸ್ಪಿ-ಶಿವಾಂಶು ರಾಜ್‌ಪೂತ್ ಹಾಗೂ ಬೆಂಗಳೂರು ವೈರ್‌ಲೆಸ್ ವಿಭಾಗದ ಎಸ್ಪಿಯಾಗಿ ಎಚ್.ಎನ್. ಮಿಥುನ್ ಅವರನ್ನು ವರ್ಗಾವಣೆ ಮಾಡಲಾಗಿದೆ.

## ಪ್ರಶಸ್ತಿಗಳು ಜವಾಬ್ದಾರಿ ಹೆಚ್ಚಿಸಿವೆ

(1ನೇ ಪುಟದಿಂದ) ಸಂಘದಲ್ಲಿ ಶನಿವಾರ 'ಬಿ.ವಿಮಲದಾಸ್ ಸೇವಾ ಪ್ರಶಸ್ತಿ' ಸ್ವೀಕರಿಸಿ ಮಾತನಾಡಿದ ಅವರು, ಮುಂದಿನ ದಿನಗಳಲ್ಲಿ ಸೇವಾ ಕಾರ್ಯಗಳಲ್ಲಿ ಮತ್ತಷ್ಟು ಹೆಚ್ಚಾಗಿ ತೊಡಗಿಸಿಕೊಳ್ಳುವುದಾಗಿ ಹೇಳಿದರು.

ತಾಯಿ ಹಾಗೂ ಮಗುವಿನ ಆರೋಗ್ಯ ರಕ್ಷಣೆ, ಸಾಂಕ್ರಾಮಿಕ ರೋಗ ಬಾರದಂತೆ ತಡೆಯುವುದು ನಮ್ಮ ಮೊದಲ ಕರ್ತವ್ಯವಾಗಿದೆ ಎಂದು ಹೇಳಿದರು.

ಇತ್ತೀಚಿನ ದಿನಗಳಲ್ಲಿ ಸಿಜೇರಿಯನ್ ಹೆರಿಗೆಗಳು ಹೆಚ್ಚಾಗಿವೆ. ಸಾಧ್ಯವಾದಷ್ಟೂ ಸಾಮಾನ್ಯ ಹೆರಿಗೆ ಮಾಡಿಸಿಕೊಳ್ಳುವಂತೆ ಅರಿವು ಮೂಡಿಸಲಾಗುವುದು. ಕ್ಷಯ ಮುಕ್ತ ಭಾರತ ಮಾಡಲು ಸರ್ಕಾರ ಕ್ರಮ ಕೈಗೊಂಡಿದ್ದು, ನಾವೂ ಸಹ ಕೈ ಜೋಡಿಸಬೇಕಿದೆ. ಹದಿ ಹರೆಯದ ಮಕ್ಕಳಿಗೆ ಆರೋಗ್ಯ ಶಿಕ್ಷಣ ನೀಡುವಲ್ಲಿಯೂ ಕಾರ್ಯೋನ್ಮುಖರಾಗುವುದಾಗಿ ಹೇಳಿದರು.

ಕೋವಿಡ್ ಸಂದರ್ಭದಲ್ಲಿ ಒಂದೇ ದಿನ ಬೆಳಿಗ್ಗೆ 8 ರಿಂದ ರಾತ್ರಿ 10 ಗಂಟೆವರೆಗೆ ಯಾರ ಸಹಾಯವೂ ಇಲ್ಲದೆ 800 ಕೋವಿಡ್ ಲಸಿಕೆ ನೀಡಿದ್ದೆ. ಜನರ ಸಹಕಾರ, ಅಧಿಕಾರಿಗಳ ಪ್ರೇರಣೆಯಿಂದ ಹೊನ್ನಾಳಿ ತಾಲ್ಲೂಕಿನಲ್ಲಿಯೇ ಹೆಚ್ಚು ಲಸಿಕೆ ನೀಡಿ, ಮರಣ ಪ್ರಮಾಣವನ್ನು ಕಡಿಮೆ ಮಾಡಿದ ಬಗ್ಗೆ ಹೆಮ್ಮೆ ಇದೆ ಎಂದು ನಾಗರತ್ನ ಹೇಳಿದರು.


### ಭಾವಪೂರ್ಣ ಶ್ರದ್ಧಾಂಜಲಿ



ಸೇಂಟ್ ಜಾನ್ಸ್ ಶಾಲೆಯ ಮಾಜಿ ಕಾರ್ಯದರ್ಶಿಗಳು,
ಬೆಸ್ಕಾಂನ ನಿವೃತ್ತ ಉದ್ಯೋಗಿಗಳೂ ಆಗಿದ್ದ
**ಆರ್ಥರ್ ಜಯ್ ಸಿಂಗ್**
ಇವರು ಸೆ.2 ರ ಶನಿವಾರ ಬೆಳಿಗ್ಗೆ ನಿಧನ ಹೊಂದಿದರು.
ಅವರಿಗೆ 76 ವರ್ಷ ವಯಸ್ಸಾಗಿತ್ತು.
ಅಂತ್ಯಕ್ರಿಯೆ ಕೂಡ ಶನಿವಾರ ಸಂಜೆಯೇ ನೆರವೇರಿತು. ಮೃತರು ಮೂವರು ಗಂಡು ಮಕ್ಕಳು ಹಾಗು ಅಪಾರ ಬಂಧುಗಳನ್ನು ಅಗಲಿದ್ದಾರೆ.
ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.


**ಹೆಚ್. ಲಕ್ಷ್ಮಣ ಮತ್ತು ಕುಟುಂಬದವರು**

### ಕುಂಬಳೂರು ಮಹಾದೇವಮ್ಮ ನಿಧನ



ಹರಿಹರ ತಾಲ್ಲೂಕು ಕುಂಬಳೂರು ಗ್ರಾಮದ ವಾಸಿ ದುರ್ಗದ ರಾಮಚಂದ್ರಪ್ಪನವರ ಧರ್ಮಪತ್ನಿ ಶ್ರೀಮತಿ ಮಹಾದೇವಮ್ಮ (65) ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರು ದಿನಾಂಕ 2.09.2023ನೇ ಶನಿವಾರ ಸಂಜೆ 4:30ಕ್ಕೆ ನಿಧನರಾದರು. ಪತಿ ಮತ್ತು ಅಪಾರ ಬಂಧು ಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 03-09-2023ರ ಭಾನುವಾರ ಮಧ್ಯಾಹ್ನ 12 ಗಂಟೆಗೆ ಮೃತರ ಸ್ವಗ್ರಾಮವಾದ ಹರಿಹರ ತಾಲ್ಲೂಕು ಕುಂಬಳೂರು ಗ್ರಾಮದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

### ಶ್ರೀಮತಿ ಗಿರಿಜಮ್ಮ ನಿಧನ



ದಾವಣಗೆರೆ ಬನಶಂಕರಿ ಬಡಾವಣೆ ವಾಸಿ, ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದ ಯುವ ಘಟಕದ ಕೆ.ಸಿ. ಕೊಟ್ರೇಶ್ ಇವರ ತಾಯಿಯವರಾದ ಶ್ರೀಮತಿ ಗಿರಿಜಮ್ಮ (67) ಅವರು ದಿನಾಂಕ 2-9-2023ರ ಶನಿವಾರ ಬೆಳಗಿನ ಜಾವ 2.30ಕ್ಕೆ ನಿಧನರಾದರು. ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 2-9-2023ರ ಶನಿವಾರ ಮಧ್ಯಾಹ್ನ ಶಾಮನೂರಿನ ರುದ್ರಭೂಮಿಯಲ್ಲಿ ನೆರವೇರಿತು.

## ಇಸ್ರೋಗೆ ಈಗ ಸೂರ್ಯನ ಕಾಂತಿ

(1ನೇ ಪುಟದಿಂದ) ಇಸ್ರೋ ಅಧ್ಯಕ್ಷ ಎಸ್. ಸೋಮನಾಥ್ ತಿಳಿಸಿದ್ದಾರೆ.

ಈ ಉಡಾವಣೆಯ ವೇಳೆ ಪಿ.ಎಸ್.ಎಲ್.ವಿ. ರಾಕೆಟ್‌ನ ಮೇಲಿನ ಹಂತ ಎರಡು ಬಾರಿ ಉರಿಯುವ ಪ್ರಕ್ರಿಯೆ ನಡೆಸಿದ್ದು ಮತ್ತೊಂದು ವಿಶೇಷ ಎಂದವರು ತಿಳಿಸಿದ್ದಾರೆ.

ಉಪಗ್ರಹ ಮುಂದಿನ 125 ದಿನಗಳ ನಂತರ ಎಲ್1 ಹಂತದ ಕಕ್ಷೆ ತಲುಪಲಿದೆ. ಇದು ಭೂಮಿಯಿಂದ 15 ಲಕ್ಷ ಕಿಲೋಮೀಟರ್ ದೂರದಲ್ಲಿದೆ. ಅಲ್ಲಿಂದ ಈ ಉಪಗ್ರಹವು ಸೂರ್ಯನ ವೈಜ್ಞಾನಿಕ ಪ್ರಯೋಗಗಳ ಚಿತ್ರಗಳನ್ನು ರವಾನಿಸಲಿದೆ.

1,480.7 ಕೆ.ಜಿ. ತೂಕದ ಆದಿತ್ಯ ಎಲ್1 ಮುಂದಿನ 16 ದಿನಗಳ ಕಾಲ ಭೂಮಿಯ ಕಕ್ಷೆಯಲ್ಲಿ ಇರಲಿದೆ. ನಂತರ ಹಲವು ಪ್ರಕ್ರಿಯೆಗಳ ನಂತರ ಸೂರ್ಯನ ಕಡೆ ಸಾಗಲಿದೆ.

ಎಲ್1 ಹಂತ ತಲುಪಿದ ನಂತರ, ಇನ್ನಷ್ಟು ಪ್ರಕ್ರಿಯೆಗಳನ್ನು ನಡೆಸಲಾಗುವುದು. ನಂತರ ಉಪಗ್ರಹವು ಭೂಮಿ ಮತ್ತು ಸೂರ್ಯನ ನಡುವೆ ಸಮತೋಲಿತ ಗುರುತ್ವಾಕರ್ಷಣೆ ಇರುವ ತಾಣದಲ್ಲಿ ನೆಲೆಗೊಳ್ಳಲಿದೆ.

ಈ ಉಪಗ್ರಹ ಐದು ವರ್ಷಗಳ ಕಾಲ ಕಾರ್ಯನಿರ್ವಹಿಸಲಿದೆ.

ಸೂರ್ಯನಿಂದ ಹೊರ ಬರುವ ಅಲೆಗಳು ಭೂಮಿಯ ವಲಯಕ್ಕೆ ತಲುಪಿ ಪ್ರಭಾವಿತವಾಗುವ ಮೊದಲೇ, ಉಪಗ್ರಹ ಅವುಗಳ ಅಧ್ಯಯನ ನಡೆಸಲಿದೆ.

## ನಗರದಲ್ಲಿಂದು ಆರೋಗ್ಯ ತಪಾಸಣೆ

ಹೋಮಿಯೋಪಥಿ ವೈದ್ಯಕೀಯ ಸಂಘ, ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ ಇಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1ರವರೆಗೆ ಕರುಣಾ ಜೀವ ಕಲ್ಯಾಣ ಟ್ರಸ್ಟ್‌ನಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಲಿದೆ. ಡಾ. ಮಾವಿಶೆಟ್ಟರ್, ಡಾ. ಕೆ.ಆರ್. ಶರತ್‌ರಾಜ್, ಡಾ. ಸಿ.ಎನ್. ಕೋಟಿಹಾಳ್, ಡಾ. ಎ.ಎನ್. ಸುಂದರೇಶ್, ಡಾ. ಆರತಿ ಸುಂದರೇಶ್, ಡಾ. ಜಿ.ಎಸ್. ಗಿರೀಶ್, ಡಾ. ವಿಶ್ವನಾಥ್ ಹಳ್ಳಿಕೇರಿ, ಡಾ. ಎಸ್. ರಂಗರಾಜನ್ ತಪಾಸಣೆ ನಡೆಸುವರು. ಸಂಪರ್ಕಿಸಿ : 63631 51534.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas




ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನ ಬದ್ಧ ಮೂಲಭೂತ ಕರ್ತವ್ಯ.

ಗಡಿಭಾಗದ ಹಾಗೂ ವಿಶೇಷ ಮಾಧ್ಯಮ ಪತ್ರಿಕೆಗಳಿಗೆ ಪ್ರೋತ್ಸಾಹ ರೂಪದ ಜಾಹೀರಾತು

# ರಾಘವೇಂದ್ರ ನಾಯರಿ ಅವರಿಗೆ 'ಜನನಿ ಯಕ್ಷಗಾನ ರತ್ನ' ಪ್ರಶಸ್ತಿ



ದಾವಣಗೆರೆ, ಸೆ.2- ವಿವಿಧ ಸಾಮಾಜಿಕ ಸಂಘಟನೆಗಳ ಸಕ್ರಿಯ ಪದಾಧಿಕಾರಿ ಕೆ. ರಾಘವೇಂದ್ರ ನಾಯರಿ ಅವರಿಗೆ 2023ನೇ ಸಾಲಿನ 'ಜನನಿ ಯಕ್ಷಗಾನ ರತ್ನ' ರಾಜ್ಯ ಪ್ರಶಸ್ತಿ ಲಭಿಸಿದೆ.

ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಹಂಪಾಪಟ್ಟಣ ಸಾಮಾಜಿಕ ಸಂಸ್ಥೆ ಜನನಿ ಕಲಾ ಮತ್ತು ಸಾಂಸ್ಕೃತಿಕ ಸಂಘ ಹಾಗೂ ಜನನಿ ಸೇವಾ ಟ್ರಸ್ಟ್ ಇವರ ಜಂಟಿ ಆಶ್ರಯದಲ್ಲಿ ವಿವಿಧ ಕ್ಷೇತ್ರಗಳ ಸಾಧಕರಿಗೆ ಕೊಡಮಾಡುವ ಈ ಪ್ರಶಸ್ತಿಯನ್ನು 'ಯಕ್ಷಗಾನ' ಕಲೆಯಲ್ಲಿ ಮಾಡುತ್ತಿರುವ ಸಾಧನೆಗೆ ರಾಘವೇಂದ್ರ ನಾಯರಿ ಅವರನ್ನು ಆಯ್ಕೆ ಮಾಡಲಾಗಿದೆ.

ಹಂಪಾಪಟ್ಟಣದಲ್ಲಿ ನಾಳೆ ದಿನಾಂಕ 3ರ ಭಾನುವಾರ ಸಂಜೆ 6.30ಕ್ಕೆ ಏರ್ಪಾಡಾಗಿರುವ ಸಮಾರಂಭದಲ್ಲಿ ರಾಘವೇಂದ್ರ ನಾಯರಿ ಅವರೂ ಸೇರಿದಂತೆ ರಾಜ್ಯದ 10 ಜನ ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಜನನಿ ಸಂಸ್ಥೆಯ ಅಧ್ಯಕ್ಷ ಅಂಬಳಿ ಕೇಶವಮೂರ್ತಿ ಪತ್ರಿಕಾ ಹೇಳಿಕೆಯಲ್ಲಿ ವಿವರಿಸಿದ್ದಾರೆ. ತಮ್ಮ ಬಾಲ್ಯದಿಂದಲೂ ಯಕ್ಷಗಾನ ಕಲೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ರಾಘವೇಂದ್ರ ನಾಯರಿ, ವೃತ್ತಿಯಲ್ಲಿ ಕೆನರಾ ಬ್ಯಾಂಕ್ ಉದ್ಯೋಗಿಯಾಗಿದ್ದು, ಪ್ರವೃತ್ತಿಯಲ್ಲಿ ಕಾರ್ಮಿಕ ಸಂಘಟನೆ, ಜನಪರ ಹೋರಾಟ, ಕನ್ನಡ ಸಾಹಿತ್ಯ ಪರಿಷತ್ ಸೇರಿದಂತೆ ಹಲವು ಸಾಮಾಜಿಕ ಸಂಸ್ಥೆಗಳಲ್ಲಿ ಸಕ್ರಿಯ ಪದಾಧಿಕಾರಿಗಳಾಗಿದ್ದಾರೆ.

ಮೂಲತಃ ಉಡುಪಿ ಜಿಲ್ಲೆಯ ಸಾಲಿಗ್ರಾಮದವರಾದ ರಾಘವೇಂದ್ರ ನಾಯರಿ ಅವರು, ರಾಜ್ಯಮಟ್ಟದ ಪ್ರಶಸ್ತಿ ಪಡೆದ ಸಂದರ್ಭದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ. ವಾಮದೇವಪ್ಪ ಅಭಿನಂದಿಸಿದ್ದಾರೆ.

# ಜಿಲ್ಲಾ ಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಆಯ್ಕೆ ವಿವರ

ದಾವಣಗೆರೆ, ಸೆ. 2 - ರಾಜ್ಯ ಶಿಕ್ಷಕರ ಕಲ್ಯಾಣ ನಿಧಿಯ ವತಿಯಿಂದ ನೀಡಲಾಗುವ 2023-24ನೇ ಸಾಲಿನ ಜಿಲ್ಲಾ ಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಗೆ ಪ್ರಾಥಮಿಕ ಹಾಗೂ ಪ್ರೌಢಶಾಲಾ ವಿಭಾಗದಿಂದ ಆಯ್ಕೆಯಾದ ಶಿಕ್ಷಕರಿಗೆ ನಾಡಿದ್ದು ದಿನಾಂಕ 5 ರ ಮಂಗಳವಾರ ಬೆಳಿಗ್ಗೆ 10 ಗಂಟೆಗೆ ನಗರದ ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ಸಮುದಾಯ ಭವನದಲ್ಲಿ ನಡೆಯುವ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ನಿವೃತ್ತ ನೌಕರರಿಗೆ ಸನ್ಮಾನ ಮತ್ತು ಜಿಲ್ಲಾ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕೃತರಿಗೆ ಸನ್ಮಾನ ಹಮ್ಮಿಕೊಳ್ಳಲಾಗಿದ್ದು, ಪ್ರಶಸ್ತಿಗೆ ಆಯ್ಕೆಯಾದ ಶಿಕ್ಷಕರ ವಿವರ ಈ ಕೆಳಕಂಡಂತಿದೆ.

**ಪ್ರಾಥಮಿಕ ಶಾಲಾ ವಿಭಾಗ** : ಚನ್ನಗಿರಿ ತಾಲ್ಲೂಕಿನ ಸತೀಶ್, ಸಹ ಶಿಕ್ಷಕರು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ತಿಮ್ಲಾಪುರ, ರತ್ನಮ್ಮ ಸಹ ಶಿಕ್ಷಕಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಬೆಟ್ಟಕಡೂರು, ಹರಿಹರ ತಾಲ್ಲೂಕಿನ ಅರುಣ್ ಬಿ, ಸಹ ಶಿಕ್ಷಕರು ಸರ್ಕಾರಿ ಪ್ರಾಥಮಿಕ ಕಿರಿಯ ಪ್ರಾಥಮಿಕ ಶಾಲೆ ಹಿಂಡಸಘಟ್ಟ, ಕೆ.ವಿ ಸುಜಾತ ಮುಖ್ಯ ಶಿಕ್ಷಕರು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಬುಳ್ಳಾಪುರ, ದಾವಣಗೆರೆ ಉತ್ತರ ವಲಯದ ತಿಪ್ಪೇಶ್ ಟಿ.ಬಿ ಸಹ ಶಿಕ್ಷಕರು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಬಿ.ಚಿತ್ತಾನಹಳ್ಳಿ, ಗಂಗಮ್ಮ ಸಹ ಶಿಕ್ಷಕಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಎಲೇಬೇತೂರು, ದಾವಣಗೆರೆ ದಕ್ಷಿಣ ವಲಯದ ಬಸವರಾಜ ಈ. ಮುಖ್ಯ ಶಿಕ್ಷಕರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಚಿಕ್ಕತೊಗಲೇರಿ, ನಾಗವೇಣಿ ಎ.ಎಲ್ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಶ್ರೀರಾಮ ಬಡಾವಣೆ, ಜಗಳೂರು ತಾಲ್ಲೂಕಿನ ಪ್ರೇಮ ಡಿ. ಸಹ ಶಿಕ್ಷಕಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಚಿಕ್ಕಮ್ಮನಹಟ್ಟಿ, ಶ್ರೀದೇವಿ ಸಹ ಶಿಕ್ಷಕರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಭರಮಸಮುದ್ರ, ಹೊನ್ನಾಳಿ ತಾಲ್ಲೂಕಿನ ಮಹಮ್ಮದ್ ರಫೀ ಬಿ. ಸಹ ಶಿಕ್ಷಕರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ತಿಮ್ಮೇನಹಳ್ಳಿ, ಸುಧಾ ಹೆಚ್.ಹೆಚ್ ಸಹ ಶಿಕ್ಷಕಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಸೊರಟೂರು.

**ಪ್ರೌಢಶಾಲಾ ವಿಭಾಗ** : ಚನ್ನಗಿರಿ ತಾಲ್ಲೂಕಿನ ಹೆಚ್.ಪಿ ಶಿವಲಿಂಗಪ್ಪ, ದೈಹಿಕ ಶಿಕ್ಷಕರು, ಸರ್ಕಾರಿ ಬಾಲಿಕಾ ಪ್ರೌಢಶಾಲೆ, ನಲ್ಲೂರು, ಹರಿಹರ ತಾಲ್ಲೂಕಿನ ಮಂಜುನಾಥ ಟಿ.ಡಿ, ಸಹ ಶಿಕ್ಷಕರು, ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರೌಢಶಾಲೆ ಶಾಲೆ, ಹರಳಹಳ್ಳಿ, ದಾವಣಗೆರೆ ಉತ್ತರವಲಯದ ನಾಗರಾಜ ಟಿ, ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಆವರಗೆರೆ, ದಾವಣಗೆರೆ ದಕ್ಷಿಣ ವಲಯದ ಶ್ರೀಕಾಂತ ಕೆ. ಸರ್ಕಾರಿ ಪ್ರೌಢಶಾಲೆ, ಹೆಚ್ ಬಸವಾಪುರ, ಜಗಳೂರು ತಾಲ್ಲೂಕಿನ ಸಿದ್ದಪ್ಪ ಹೆಚ್.ಎಸ್, ಸಹ ಶಿಕ್ಷಕ, ಸರ್ಕಾರಿ ಪ್ರೌಢಶಾಲೆ, ದೇವಿಕೆರೆ, ಹೊನ್ನಾಳಿ ತಾಲ್ಲೂಕಿನ ಮಹೇಂದ್ರನಾಥ್ ಕೆ.ಜಿ, ಸಹ ಶಿಕ್ಷಕರು ಮಾರಿಕಾಂಭ ಪ್ರೌಢಶಾಲೆ, ಉಜ್ಜನೀಪುರ.

**ವಿಶೇಷ ಪ್ರಶಸ್ತಿ** : ದಾವಣಗೆರೆ ಉತ್ತರ ವಲಯದ ಆರ್ ಅನ್ನಪೂರ್ಣ, ಸರ್ಕಾರಿ ಹಿರಿಯ ಪ್ರೌಢಶಾಲೆ ಎಲೇಬೇತೂರು, ಹಾಲಪ್ಪ ಡಿ, ಸಹ ಶಿಕ್ಷಕ ಸಿ.ವಿ.ವಿ. ಕನ್ನಡ ಹಿರಿಯ ಪ್ರೌಢಶಾಲೆ ಶಾಲೆ, ಕೆ.ಪಿ. ರಸ್ತೆ, ದಾವಣಗೆರೆ, ಹೊನ್ನಾಳಿ ತಾಲ್ಲೂಕಿನ ಕುಮಾರನಾಯ್ಕ್ ಎಸ್, ಸಹ ಶಿಕ್ಷಕರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕಮ್ಮಾರಗಟ್ಟೆ, ನ್ಯಾಮತಿ ತಾಲ್ಲೂಕಿನ ವಿಜಯಲಕ್ಷ್ಮಿ ಬಿ, ಸಹ ಶಿಕ್ಷಕಿ ಸರ್ಕಾರಿ ಕಿರಿಯ ಪ್ರೌಢಶಾಲೆ ಸುರಹೊನ್ನೆ, ರವಿಕುಮಾರ ಹೆಚ್, ಮುಖ್ಯ ಶಿಕ್ಷಕ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಟಿ. ಗೋಪಗೊಂಡನಹಳ್ಳಿ, ಬಸವರಾಜ ಕೆ. ವಿ, ಸಹ ಶಿಕ್ಷಕ, ಸರ್ಕಾರಿ ಪ್ರೌಢಶಾಲೆ, ಜೀನಹಳ್ಳಿ.

ಆಯ್ಕೆಯಾದ ಶಿಕ್ಷಕರಿಗೆ ನಾಡಿದ್ದು ದಿನಾಂಕ 5 ರಂದು ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪುರಸ್ಕೃತ ರಿಗೆ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಜಿ. ಕೊಟ್ರೇಶ್ ತಿಳಿಸಿದ್ದಾರೆ.

# ಹಳೇ ಕುಂದುವಾಡದಲ್ಲಿ ಇಂದು, ನಾಳೆ ಶ್ರಾವಣ ಮಾಸ ಕಾರ್ಯಕ್ರಮ



ಹಳೇ ಕುಂದುವಾಡದಲ್ಲಿರುವ ಓಂ ಶ್ರೀ ಕರಿಬಸವೇಶ್ವರ ಸ್ವಾಮಿ ಪುಣ್ಯಕ್ಷೇತ್ರದಲ್ಲಿ ಇಂದು ಮತ್ತು ನಾಳೆ ಶ್ರಾವಣ ಮಾಸ ಕಾರ್ಯಕ್ರಮ ನಡೆಯಲಿದೆ. ಇಂದು ಸಂಜೆ 7 ಗಂಟೆಗೆ ಶ್ರೀ ಕರಿಬಸವೇಶ್ವರ ಅಜ್ಜಯ್ಯನವರ ಪುಣ್ಯಾರಾಧನೆ ನಡೆಯುವುದು. ದಿವ್ಯಸಾನ್ನಿಧ್ಯವನ್ನು ಧರ್ಮಾಧಿ ಕಾರಿ ಜೆ. ರಾಜಣ್ಣ ವಹಿಸುವರು. ಇಂದು ಸಂಜೆ 7 ಗಂಟೆಗೆ ಅಘೋರಾಸ್ತ್ರ, ಪಾಶುಪತಾಸ್ತ್ರ, ಹೋಮ, ಹವನ ನಡೆಯುವುದು. ಪೌರೋಹಿತ್ಯ : ಎಸ್. ರಾಮಕೃಷ್ಣ ಭಟ್. ನಾಳೆ ಸೋಮವಾರ ಬೆಳಿಗ್ಗೆ 6 ಗಂಟೆಗೆ ಏಕಾದಶ ರುದ್ರಾಭಿಷೇಕ ನಡೆಯುವುದು. ಟ್ರಸ್ಟ್ ಗೌರವಾಧ್ಯಕ್ಷ ಶಾಸಕ ಶಾಮನೂರು ಶಿವಶಂಕರಪ್ಪ ಅವರ ಆಯುಷ್ಯ ಆರೋಗ್ಯ ಅಭಿವೃದ್ಧಿಗಾಗಿ ಮೃತ್ಯುಂಜಯ ಜಪ, ಸರ್ವಸಿದ್ಧಿ ಹೋಮ, ಹವನ ಏರ್ಪಾಡಾಗಿದೆ.

# ಬಿ ಕಲಪನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ನಿರ್ದೇಶಕರ ಆಯ್ಕೆ

ದಾವಣಗೆರೆ, ಸೆ.2- ತಾಲ್ಲೂಕಿನ ಬಿ ಕಲಪನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಮೊನ್ನೆ ನಡೆದ ಚುನಾವಣೆಯಲ್ಲಿ ಆಡಳಿತ ಮಂಡಳಿ ನಿರ್ದೇಶಕರಾಗಿ ಅರುಣ್‌ಕುಮಾರ್ ಡಿ.ಕೆ, ಬಸವನಗೌಡ ಕೆ.ಇ, ಕಿರಣ್‌ಕುಮಾರ್ ಕೆ.ಜಿ, ವಿನಯ್‌ಕುಮಾರ್ ಜಿ.ವಿ, ಚಂದ್ರಪ ಜಿ, ನಾಗರಾಜ ಎಂ.ಬಿ, ಅನ್ನಪೂರ್ಣಮ್ಮ, ಕರಿಬಸಮ್ಮ, ರಾಮಪ್ಪ ಕೆ.ಆರ್, ಬಸವೇಶ್ ಎಂ.ಬಿ, ಸಣ್ಣಬಸಪ್ಪ ಹೆಚ್ ಮತ್ತು ಯಲ್ಲಪ್ಪ ಇವರುಗಳು ಆಯ್ಕೆಯಾಗಿದ್ದಾರೆ.

# ನಗರದಲ್ಲಿ ಇಂದು ಟಿಇಟಿ ಪರೀಕ್ಷೆ


ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆಯನ್ನು ಜಿಲ್ಲೆಯ 23 ಪರೀಕ್ಷಾ ಕೇಂದ್ರಗಳಲ್ಲಿ ಇಂದು ನಡೆಸಲಾಗುತ್ತಿದೆ. ಮೊದಲ ಅಧಿವೇಶನ ಬೆಳಿಗ್ಗೆ 9.30 ರಿಂದ ಮಧ್ಯಾಹ್ನ 12 ರವರೆಗೆ ಹಾಗೂ 2ನೇ ಅಧಿವೇಶನ ಅಪರಾಹ್ನ 2.30 ರಿಂದ 4 ರವರೆಗೆ ನಡೆಯುತ್ತದೆ. ಒಟ್ಟು 7086 ಅಭ್ಯರ್ಥಿಗಳು ಪರೀಕ್ಷೆ ಬರೆಯುತ್ತಾರೆ ಎಂದು ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಕೊಟ್ರೇಶ್ ತಿಳಿಸಿದ್ದಾರೆ.

# ಬೆಳ್ಳೂಡಿ ಪಿಎಸಿಎಸ್ ಅಧ್ಯಕ್ಷರಾಗಿ ಶೇಖರಪ್ಪ



ಮಲೇಬೆನ್ನೂರು, ಸೆ.2- ಬೆಳ್ಳೂಡಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಬಿ.ಶೇಖರಪ್ಪ ಅವರು ಶನಿವಾರ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಸಹಕಾರ ಅಭಿವೃದ್ಧಿ ಅಧಿಕಾರಿ ಶ್ರೀಮತಿ ಸುನೀತಾ ಅವರು ಚುನಾವಣಾಧಿಕಾರಿಯಾಗಿ ಕಾರ್ಯನಿರ್ವಹಿಸಿದರು. ಸಂಘದ ನಿರ್ದೇಶಕರಾದ ಜಿ.ಎಂ.ಸಿದ್ದೇಶ್, ಕುಪ್ಪೇಲೂರು ಸಿದ್ದೇಶ್, ಸೊಪ್ಪಿನ ಪ್ರಮೀಳಮ್ಮ, ಎನ್.ಕೆ.ಪ್ರಕಾಶ್, ಕೂಲ್ದಾರ್ ಮಾರುತಿ, ಬಿ.ಎಸ್.ವಿರೂಪಾಕ್ಷಪ್ಪ, ಜಿ.ಎಂ.ಹನುಮಂತಪ್ಪ, ಸತ್ವಾಳಿ ಸಿದ್ದೇಶ್, ಕೆ.ಜಿ.ಗಾಯಿತ್ರಮ್ಮ, ಎನ್.ಕೆ.ಮೋಹನ್ ಮತ್ತು ಸಂಘದ ಕಾರ್ಯದರ್ಶಿ ಜಿ.ಹೆಚ್.ಬಸವರಾಜ್ ಈ ವೇಳೆ ಹಾಜರಿದ್ದರು.

# ಜಿಗಳಿ ಕ್ಯಾಂಪ್‌ನಲ್ಲಿ ಇಂದು ಗುರುವಂದನೆ



ಜಿಗಳಿ ಸಮೀಪದ ವಿನಾಯಕ ನಗರ ಕ್ಯಾಂಪ್‌ನಲ್ಲಿರುವ ಕಾಲಜ್ಞಾನಿ ಶ್ರೀ ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ಅವರ ಜನ್ಮವರ್ಧಂತಿ ಪ್ರಯುಕ್ತ ಇಂದು ಸಂಜೆ 5 ಕ್ಕೆ ಸಹಸ್ರ ಮೋದಿಕ ಮಹಾಯಾಗ ಮತ್ತು ಗುರುವಂದನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

# ನಗರದಲ್ಲಿ ಇಂದು ಶ್ರಾವಣ ಸಂಗೀತ ಸಂಭ್ರಮ

ಕಲಾಕುಂಚ ಸಾಂಸ್ಕೃತಿಕ ಸಂಸ್ಥೆ, ಡಿ.ಸಿ.ಎಂ. ಶಾಖೆ ಆಶ್ರಯದಲ್ಲಿ ಡಿ.ಸಿ.ಎಂ. ಟೌನ್ ಶಿಪ್‌ನಲ್ಲಿರುವ ಶ್ರೀ ಚೌಡೇಶ್ವರಿ ದೇವಸ್ಥಾನ ಸಭಾಂಗಣದಲ್ಲಿ ಇಂದು ಸಂಜೆ 4 ಕ್ಕೆ ಶ್ರಾವಣ ಸಂಗೀತ ಸಂಭ್ರಮ ಕಾರ್ಯಕ್ರಮ ಆಯೋಜಿಸಲಾಗಿದೆ.

ಉದ್ಘಾಟನೆಯನ್ನು ಕೆ. ಹಾಲಪ್ಪ ನೆರವೇರಿಸುವರು. ಶ್ರೀಮತಿ ಶಾರದಮ್ಮ ಶಿವನಪ್ಪ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಸಾಲಿಗ್ರಾಮ ಗಣೇಶ್ ಶೆಣೈ, ಕೆ.ಹೆಚ್. ಮಂಜುನಾಥ್, ಶ್ರೀಮತಿ ಹೇಮಾ ಶಾಂತಪ್ಪ ಪೂಜಾರಿ ಭಾಗವಹಿಸುವರು.

# ರಾಘವೇಂದ್ರ ಶ್ರೀಗಳ ಆರಾಧನಾ ಮಹೋತ್ಸವ



**ಹರಿಹರ**

ಹರಿಹರ, ಸೆ. 2 - ನಗರದ ತುಂಗಭದ್ರಾ ನದಿ ದಂಡೆಯ ಹತ್ತಿರದ ಶ್ರೀ ರಾಘವೇಂದ್ರ ಸ್ವಾಮಿ ಮಠದಲ್ಲಿಂದು 352 ನೇ ಆರಾಧನಾ ಮಹೋತ್ಸವದ ನಿಮಿತ್ತವಾಗಿ ವಿಶೇಷ ಪೂಜಾ ಕಾರ್ಯಗಳನ್ನು ನೆರವೇರಿಸಲಾಯಿತು.

ಈ ಸಂದರ್ಭದಲ್ಲಿ ಪಂಚಮಸಾಲಿ ಗುರುಪೀಠಾಧ್ಯಕ್ಷರಾದ ಶ್ರೀ ವಚನಾನಂದ ಮಹಾಸ್ವಾಮಿಗಳು, ಶ್ರೀ ರಾಘವೇಂದ್ರ ಸ್ವಾಮಿಗಳ ವೃಂದಾವನ ಟ್ರಸ್ಟ್ ಅಧ್ಯಕ್ಷ ಬಿ. ಬಸವರಾಜ್, ಕಾರ್ಯದರ್ಶಿ ಸುಕುಮಾರ್ ಹೆಬ್ಬಾರ್, ಖಜಾಂಚಿ ರಂಗನಾಥ್ , ಧರ್ಮದರ್ಶಿಗಳಾದ ಮಂಜುನಾಥ್, ಶಿವಪ್ರಕಾಶ್ ಶಾಸ್ತ್ರಿ, ಪ್ರಕಾಶ್ ಕೋಳೂರು, ಪಿ.ನಾಗರಾಜ್, ಶ್ರೀಧರ ಮೂರ್ತಿ, ಪ್ರಧಾನ ಅರ್ಚಕರು ವರಾಹಚಾರ್, ಪವನ್ ಕುಮಾರ್, ಅನಂತ್ ಕನವಳ್ಳಿ, ವೈ. ಲಕ್ಷ್ಮಣ ಮತ್ತಿತರರು ಉಪಸ್ಥಿತರಿದ್ದರು.

# ನಗರದಲ್ಲಿ 'ಗೃಹಶೋಭೆ' ಉದ್ಘಾಟನೆ



ದಾವಣಗೆರೆ, ಸೆ.2- ನಗರದ ಹೈಸ್ಕೂಲ್ ಮೈದಾನದಲ್ಲಿ ನಡೆಯುತ್ತಿರುವ ಗೃಹಬಳಕೆ ವಸ್ತುಗಳ ಮಾರಾಟ ಮೇಳ, ಮಾನ್‌ಸೂನ್ ಶಾಪಿಂಗ್ ಫೆಸ್ಟಿವಲ್ ಗೃಹಶೋಭೆ ಉದ್ಘಾಟನೆಯನ್ನು ಶಾಸಕ ಶಾಮನೂರು ಶಿವಶಂಕರಪ್ಪ ನೆರವೇರಿಸಿದರು. ಪಾಲಿಕೆ ಮಾಜಿ ಸದಸ್ಯ ದಿನೇಶ್ ಕೆ.ಶೆಟ್ಟಿ, ಕುರುಡಿ ಗಿರೀಶ್, ಎ.ಭದ್ರಪ್ಪ, ವೀರೇಶ್, ಬದರಿನಾಥ್, ಯುವರಾಜ್ ಉಪಸ್ಥಿತರಿದ್ದರು. ಇದೇ ದಿನಾಂಕ 10ರವರೆಗೆ ಗೃಹಶೋಭೆ ನಡೆಯಲಿದೆ ಎಂದು ಆಯೋಜಕ ನಾಗಚಂದ್ರ ತಿಳಿಸಿದ್ದಾರೆ.

# ನಗರದಲ್ಲಿ ಇಂದು ಮಹತೀ ನಿನಾದ

ಮಹತೀ ಸಾಂಸ್ಕೃತಿಕ ಕಲಾ ಸಂಸ್ಥೆ ವತಿಯಿಂದ 'ಮಹತೀ ನಿನಾದ' ಸಂಗೀತ ಪದವಿ ತರಗತಿಗಳ ಉದ್ಘಾಟನಾ ಸಮಾರಂಭವು ಇಂದು ಸಂಜೆ 5 ಗಂಟೆಗೆ ಕುವೆಂಪು ಕನ್ನಡ ಭವನದಲ್ಲಿ ಜರುಗಲಿದೆ. ಮೈಸೂರಿನ ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವ ವಿದ್ಯಾಲಯದ ಕುಲಪತಿ ಪ್ರೊ. ನಾಗೇಶ್ ಬಿ. ಬೆಟ್ಟಕೋಟೆ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಜಿಲ್ಲಾಧಿಕಾರಿ ಡಾ. ಎಂ.ವಿ. ವೆಂಕಟೇಶ್, ಕನ್ನಡ ಜಾನಪದ ಪರಿಷತ್ ಸದಸ್ಯ ಡಾ. ಎನ್. ಬಾಲಾಜಿ ಪಾಲ್ಗೊಳ್ಳಲಿದ್ದು, ಸಂಸ್ಥೆಯ ಅಧ್ಯಕ್ಷ ಡಾ. ಜೆ.ಎಸ್. ಮುಕುಂದರಾವ್ ಅಧ್ಯಕ್ಷತೆ ವಹಿಸುವರು.


# ಇಂದು ಕಾಂಗ್ರೆಸ್ ಸಾಮಾಜಿಕ ನ್ಯಾಯ ಸಮಿತಿ ಸಭೆ

ದಾವಣಗೆರೆ ಜಿಲ್ಲಾ ಕಾಂಗ್ರೆಸ್ ಪಕ್ಷದ ಸಾಮಾಜಿಕ ನ್ಯಾಯ ಸಮಿತಿ ಸಭೆಯನ್ನು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ. ಮಂಜಪ್ಪ ಅಧ್ಯಕ್ಷತೆಯಲ್ಲಿ ಇಂದು ಕರೆಯಲಾಗಿದೆ ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ತಿಳಿಸಿದ್ದಾರೆ. ಅಂದು ಬೆಳಿಗ್ಗೆ 11-30 ಗಂಟೆಗೆ ಜಿಲ್ಲಾ ಕಾಂಗ್ರೆಸ್ ಪಕ್ಷದ ಕಚೇರಿಯಲ್ಲಿ ನಡೆಯುವ ಈ ಸಭೆಯಲ್ಲಿ ಕಾಂಗ್ರೆಸ್ ಪಕ್ಷದ ಸಾಮಾಜಿಕ ನ್ಯಾಯ ಸಮಿತಿಗೆ ನೂತನ ಪದಾಧಿಕಾರಿಗಳನ್ನು ನೇಮಕ ಮಾಡಲಾಗುವುದು.

# ಎಂಟು ಸದಸ್ಯರ ಸಮಿತಿ ರಚನೆ

**(1ನೇ ಪುಟದಿಂದ)** ನಾಯಕ ಅಧೀರ್ ರಂಜನ್ ಚೌಧರಿ, ರಾಜ್ಯಸಭೆಯಲ್ಲಿ ಪ್ರತಿಪಕ್ಷದ ಮಾಜಿ ನಾಯಕ ಗುಲಾಂ ನಬಿ ಆಜಾದ್ ಹಾಗೂ ಹಣಕಾಸು ಆಯೋಗದ ಮಾಜಿ ಕಾರ್ಯದರ್ಶಿ ಎನ್.ಕೆ. ಸಿಂಗ್ ಸದಸ್ಯರಾಗಿದ್ದಾರೆ. ಸಮಿತಿ ತಕ್ಷಣದಿಂದಲೇ ಕಾರ್ಯನಿರ್ವಹಿಸಬೇಕು ಎಂದು ತಿಳಿಸಲಾಗಿದೆ. ಆದರೆ, ಶಿಫಾರಸ್ಸು ಸಲ್ಲಿಸಲು ಯಾವುದೇ ಕಾಲಮಿತಿ ನಿಗದಿ ಪಡಿಸಿಲ್ಲ. ಈ ಸಮಿತಿಯಲ್ಲಿ ಲೋಕಸಭೆ ಮಾಜಿ ಪ್ರಧಾನ ಕಾರ್ಯದರ್ಶಿ ಸುಭಾಷ್ ಕಶ್ಯಪ್, ಹಿರಿಯ ವಕೀಲ ಹರೀಶ್ ಸಾಳ್ವೆ ಹಾಗೂ ಮಾಜಿ ಮುಖ್ಯ ವಿಚಕ್ಷಣ ಆಯುಕ್ತ ಸಂಜಯ್ ಕೊಠಾರಿ ಅವರೂ ಇದ್ದಾರೆ. ಕಾನೂನು ಸಚಿವ ಅರ್ಜುನ್ ಮೇಘ್ವಾಲ್ ಅವರು ವಿಶೇಷ ಆಹ್ವಾನಿತರಾಗಿದ್ದಾರೆ. ಕಾನೂನು ಕಾರ್ಯದರ್ಶಿ ನಿತಿನ್ ಚಂದ್ರ ಅವರು ಸಮಿತಿಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಲಿದ್ದಾರೆ.

# ಉಕ್ಕಡಗಾತ್ರಿ : ನಾಳೆ ಶ್ರೀ ಕರಿಬಸವೇಶ್ವರ ಅಜ್ಜಯ್ಯನ ಬೆಳ್ಳಿ ರಥೋತ್ಸವ



ಮಲೇಬೆನ್ನೂರು, ಸೆ.2- ಸುಕ್ಷೇತ್ರ ಉಕ್ಕಡಗಾತ್ರಿಯಲ್ಲಿ ಪವಾಡ ಪುರುಷ ಶ್ರೀ ಗುರು ಕರಿಬಸವೇಶ್ವರ ಸ್ವಾಮಿಗಳವರ ಪುಣ್ಯಾರಾಧನೆ ಹಾಗೂ ಶ್ರಾವಣ ಮಾಸದ ಅಂಗವಾಗಿ ನಾಳೆ ದಿನಾಂಕ 4ರ ಸೋಮವಾರ ಬೆಳಿಗ್ಗೆ 10.30ಕ್ಕೆ ಬೆಳ್ಳಿ ರಥೋತ್ಸವ ಜರುಗಲಿದೆ. ಅಂದು ಬೆಳಿಗ್ಗೆ 6 ಗಂಟೆಯಿಂದ ಲೋಕ ಕಲ್ಯಾಣಾರ್ಥವಾಗಿ ಗಣಹೋಮ ಮತ್ತು ರುದ್ರಹೋಮ ನೆರವೇರಲಿದ್ದು, ರಾತ್ರಿ 8 ಗಂಟೆಗೆ ಅಜ್ಜಯ್ಯನ ಪಾಲಿಕೋತ್ಸವ ನಡೆಯಲಿದೆ ಎಂದು ಗದ್ದುಗೆ ಟ್ರಸ್ಟ್ ಕಮಿಟಿ ಕಾರ್ಯದರ್ಶಿ ಸುರೇಶ್ ತಿಳಿಸಿದ್ದಾರೆ.

# ಒಳಿತು ಮಾಡುವ ತುಡಿತವಿರಲಿ

**(1ನೇ ಪುಟದಿಂದ)** ಪ್ರಶಸ್ತಿ ಸ್ವೀಕರಿಸು ತ್ತಿರುವ ನಾಗರತ್ನ ಅವರು ಸೇವಾ ಗುರಿ ಇಟ್ಟು ಕೊಂಡು ಸಾಧನೆ ಮಾಡಲು ಹೊರಟಿರುವುದು ಶ್ಲಾಘನೀಯ ಎಂದರು.

ರಾಷ್ಟ್ರಪ್ರಶಸ್ತಿ ಪಡೆಯುವುದು ಸಾಮಾನ್ಯ ವಿಷಯವಲ್ಲ. ಅಂತಹ ಸಾಧನೆ ಮಾಡಿದವರು ನಮ್ಮ ಜಿಲ್ಲೆಯವರೇ ಎಂಬುದು ಹೆಮ್ಮೆಯ ವಿಷಯ. ರೋಗಿಗಳ ಜೊತೆ ವೈದ್ಯರಿಗಿಂತ ಹೆಚ್ಚು ಒಡನಾಟ ಹೊಂದಿದವರು ನರ್ಸ್‌ಗಳು, ಅದರಲ್ಲೂ ಕೋವಿಡ್ ಸಂದರ್ಭದಲ್ಲಿ ಧೈರ್ಯದಿಂದ ರೋಗಿಗಳ ಹಿತ ಕಾಪಾಡಿದ ಶ್ರೇಯಸ್ಸು ನರ್ಸ್‌ಗಳಿಗೆ ಸಲ್ಲುತ್ತದೆ ಎಂದರು.

ಬಿ.ವಿಮಲದಾಸ್ ಅವರ ಹೆಸರಿನಲ್ಲಿ ಪುರಸ್ಕಾರ ಮಾಡುತ್ತಿರುವುದರಿಂದ ಅವರನ್ನು ಕೊನೆಯವರೆಗೂ ಜೀವಂತವಾಗಿಡುವ ಕೆಲಸವನ್ನು ಸಂಘವು ಮಾಡುತ್ತಿರುವುದು ಪ್ರಶಂಸನೀಯ ಎಂದು ಹೇಳಿದರು.

ಬಿಐಇಟಿ ನಿರ್ದೇಶಕ ಡಾ.ವೈ.ವೃಷಭೇಂದ್ರಪ್ಪ ಮಾತನಾಡುತ್ತಾ, ಮಹಿಳೆಯರ ಸಮಸ್ಯೆಗಳಿಗೆ ಪರಿಹಾರ ಕೊಡುತ್ತಾ ಎಲೆಮರೆ ಕಾಯಿಯಂತೆ ಕೆಲಸ ಮಾಡಿದ್ದ ವಿಮಲದಾಸ್ ಅವರು ಉತ್ತಮ ಕವಯತ್ರಿಯೂ, ಉತ್ತಮ ಆಡಳಿತಗಾರರೂ ಆಗಿದ್ದರು ಎಂದು ನೆನಪಿಸಿಕೊಂಡರು.

ವೈದ್ಯರು ಪರೀಕ್ಷಿಸಿ ಔಷಧಿ ಕೊಡುತ್ತಾರೆ. ಆದರೆ ಕಾಲಕಾಲಕ್ಕೆ ಔಷಧಿ ನೀಡಿ ಆರೋಗ್ಯ ಗುಣಪಡಿಸುವಲ್ಲಿ ನರ್ಸ್‌ಗಳ ಪಾತ್ರ ಮಹತ್ವದ್ದು. ವೈದ್ಯರ ಜೊತೆ ನರ್ಸ್‌ಗಳೂ ಕೈ ಜೋಡಿಸಿದಾಗ ಯಶಸ್ಸು ಸಿಗುತ್ತದೆ ಎಂದರು.

ಜಾಗೃತಿ ಮಹಿಳಾ ಸಂಘದ ಅಧ್ಯಕ್ಷೆ ಉಮಾ ವೀರಭದ್ರಪ್ಪ ಅಧ್ಯಕ್ಷತೆ ವಹಿಸಿದ್ದರು. ಎಸ್.ಎಸ್. ಮೆಡಿಕಲ್ ಕಾಲೇಜು ಪೆಥಾಲಜಿ ವಿಭಾಗದ ಮುಖ್ಯಸ್ಥೆ ಡಾ.ಶಶಿಕಲಾ ಕೃಷ್ಣಮೂರ್ತಿ, ಡಿಆರ್‌ಎಂ ಕಾಲೇಜು ನಿವೃತ್ತ ಪ್ರಾಂಶುಪಾಲೆ ಶಕುಂತಲಾ ಗುರುಸಿದ್ದಯ್ಯ, ಎ.ಆರ್.ಜಿ. ಕಾಲೇಜು ನಿವೃತ್ತ ಉಪನ್ಯಾಸಕಿ ಶೋಭಾ ಬಸವರಾಜ್, ನಿವೃತ್ತ ಪ್ರಾಂಶುಪಾಲರಾದ ಎಂ. ಬಸವರಾಜ್ ಉಪಸ್ಥಿತರಿದ್ದರು.

ಸಂಘದ ಕಾರ್ಯದರ್ಶಿ ಅಮಿನಾಬಾನು ಪ್ರಾಸ್ತಾವಿಕವಾಗಿ ಮಾತನಾಡಿದರು. ಸಾಹಿತಿ ಸತ್ಯಭಾಮ ಮಂಜುನಾಥ್ ಪ್ರಶಸ್ತಿ ಪುರಸ್ಕೃತರನ್ನು ಪರಿಚಯಿಸಿದರು. ಕೆ.ಬಿ. ಸುಮಾ ನಿರೂಪಿಸಿದರು. ಮಮತಾ ಪ್ರಾರ್ಥಿಸಿದರು. ಎಸ್. ಕುಮಾರ್ ಸ್ವಾಗತಿಸಿದರು. ಟಿ.ಹೇಮಲತಾ ಸಂಘದ ಪರಿಚಯ ಮಾಡಿಕೊಟ್ಟರು. ಕು.ಎಂ.ಶ್ವೇತಾ ವಂದಿಸಿದರು.




## ಮಾನ್ಯ ಹಿರಿಯ ದಿವಾಣಿ ನ್ಯಾಯಾಧೀಶರು ರಾಣೇಬೆನ್ನೂರು ಇವರ ನ್ಯಾಯಾಲಯದಲ್ಲಿ

**ಅಸಲ ದಾವಾ ನಂ. 329 /2018**

ವಾದಿ: 1) ಶ್ರೀಮತಿ ನೀಲಮ್ಮ @ ಲಲಿತಮ್ಮ ಕೋಂ ಎಸ್.ಎಮ್. - ವಿರುದ್ಧ -

ಪ್ರತಿವಾದಿಯರು : 1) ವಿಜಯ್ ತಂದೆ : ಚನ್ನವೀರಯ್ಯ ಚಿಕ್ಕಮಠ

ಇಸ್ತಿಹಾರ ನಾಮಾ : 5) ಶ್ರೀಮತಿ ನೀಲಮ್ಮ ಕೋಂ ಗದಿಗಯ್ಯ ಶೆಟ್ಟರ ಗುರುವಿನಮಠ ವಯಸ್ಸು 55 ವರ್ಷ, ಉದ್ಯೋಗ: ಮನೆಗೆಲಸ, ಸಾ: ಕೇರ್ ಆಫ್ - ಬಸವರಾಜಯ್ಯ ಚಿನ್ನು ನಿಲಯ 6921ಎಫ್/6 ಕೊಟ್ಟೂರೇಶ್ವರ ಬಡಾವಣೆ ನಿಟ್ಟುವಳ್ಳಿ, ದಾವಣಗೆರೆ ತಾ: ಜಿ: ದಾವಣಗೆರೆ.

17) ಶ್ರೀಮತಿ ನಾಗರತ್ನ ಕೋಂ ರೇವಣಶಿದ್ದಯ್ಯ ವಯಾ:48 ವರ್ಷ ಉದ್ಯೋಗ: ಮನೆಗೆಲಸ ಸಾ: 4 ಮೇನ್, 4 ಕ್ರಾಸ್ ವಿನೋಬನಗರ, ದಾವಣಗೆರೆ, ತಾ: ಜಿ: ದಾವಣಗೆರೆ.

**ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ 5 ನಿಯಮ 20 ರ ಅಡಿಯಲ್ಲಿ**

ಸದರಿ ದಾವೆಯಲ್ಲಿನ ಪ್ರತಿವಾದಿ ನಂ 5 ಮತ್ತು 17 ನೇ ದ್ದವರಿಗೆ ತಿದ್ದುಪಡಿ ಅಸಲರ್ಜಿಯು ಜಾರಿ ಯಾಗುವ ಕುರಿತು ಮಾನ್ಯ ನ್ಯಾಯಾಲಯದವರು ಹಲವಾರು ಬಾರಿ ಸಮನ್ಸ್ ಜಾರಿ ಮಾಡಿದ್ದು ಇತ್ತು. ಆದರೆ ಸದರ ಅಸಲರ್ಜಿಯಲ್ಲಿ ಕಾಣಿಸಿದ ವಿಳಾಸಕ್ಕೆ ಮಾನ್ಯ ನ್ಯಾಯಾಲಯವು ಅನೇಕ ಬಾರಿ ಸಮನ್ಸ್ ಕಳುಹಿಸಿದರೂ ಅವು ಸದರಿ ಪ್ರತಿವಾದಿಯರಿಗೆ ಜಾರಿಯಾಗಿರುವುದಿಲ್ಲ, ಕಾರಣ ದಿನಪತ್ರಿಕೆಯಲ್ಲಿ ಸಮನ್ಸ್‌ಅನ್ನು ಪ್ರಚುರಪಡಿಸಿದ್ದು, ಕಾರಣ ತಮ್ಮದು ಯಾವುದೇ ರೀತಿ ತಕರಾರು ಇದ್ದಲ್ಲಿ ತಾವಾಗಲೀ ಹಾಗೂ ತಮ್ಮ ಪರ ವಕೀಲರಾಗಲೀ ಈ ಮೇಲ್ಕಾಣಿಸಿದ ಮಾನ್ಯ ನ್ಯಾಯಾಲಯಕ್ಕೆ ದಿನಾಂಕ: 25.09.2023 ರಂದು ಮುಂಜಾನೆ 10-30 ಘಂಟೆಗೆ ಹಾಜರಿದ್ದು, ತಕರಾರು ಸಲ್ಲಿಸಲು ಕೋರಿದೆ, ತಪ್ಪಿದಲ್ಲಿ ಸದರಿ ದಾವೆಯನ್ನು ಸದರಿ ಪ್ರತಿವಾದಿಯರ ವಿರುದ್ಧ ಏಕಪಕ್ಷೀಯವಾಗಿ ವಿಚಾರಣೆಗೆ ಎತ್ತಿಕೊಳ್ಳಲಾಗುವುದು. ಈ ದಿವಸ ದಿನಾಂಕ:31.08.2023 ರಂದು ನಮ್ಮ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಕೊಡಲ್ಪಟ್ಟಿದೆ.

**ದಿನಾಂಕ : 31.08.2023**
**ಸಹಿ/- ವಾದಿಯ ಪರ ವಕೀಲರು**
**ಜಿ.ಬಿ ಅಂದಾನಿಗೌಡ್ರ**

**ನ್ಯಾಯಾಲಯದ ಆದೇಶದ ಮೇರೆಗೆ**
**ಸಹಿ/- ಶಿರಸ್ತೇದಾರರು**
**ಮಾನ್ಯ ಹಿರಿಯ ದಿವಾಣಿ ನ್ಯಾಯಾಲಯ ರಾಣೇಬೆನ್ನೂರು.**

## ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ದಾವಣಗೆರೆ

ಆಡಳಿತ ಕಛೇರಿ, ನಂ.120, ಹರ್ಡೇಕರ್ ಮಂಜಪ್ಪ ರಸ್ತೆ, ದಾವಣಗೆರೆ-577 001

### ಡಿಮಾಂಡ್ ನೋಟೀಸ್

ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಪೋರ್ಸ್‌ಮೆಂಟ್) ನಿಯಮಗಳು 2002 ರ ನಿಯಮ 3 ರ ಅನ್ವಯ ಸೆಕ್ಯೂರಿಟೈಜೇಷನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002ರ ಅಡಿಯಲ್ಲಿ 13(2) ರ ಅಡಿಯಲ್ಲಿ ಕೆಳ ಸಹಿದಾರರು ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿ., ಅಧಿಕೃತ ಅಧಿಕಾರಿಯಾಗಿರುವುದರಿಂದ ಸೆಕ್ಯೂರಿಟೈಜೇಷನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002ರ ಅಡಿಯಲ್ಲಿ ಮತ್ತು ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಪೋರ್ಸ್‌ಮೆಂಟ್) ನಿಯಮ 2002ರ ನಿಯಮ 3ರ ಅನ್ವಯ ಸೆಕ್ಷನ್ 13(2)ರ ಅಡಿಯಲ್ಲಿ ನಿಹಿತವಾದ ಅಧಿಕಾರಗಳನ್ನು ಚಲಾಯಿಸಿ ಡಿಮಾಂಡ್ ನೋಟೀಸನ್ನು ನೀಡಿ ಈ ಕೆಳಗೆ ಪಟ್ಟಿ ಮಾಡಿರುವ ಸಾಲಗಾರರು/ಅಥವಾ ಸಹ ಸಾಲಗಾರರು/ಅಥವಾ ಅಧಿಕೃತ ಉತ್ತರಾಧಿಕಾರಿಗಳು ಕೆಳಗೆ ಕೊಟ್ಟಿರುವ ವಿವರಗಳ ಪ್ರಕಾರ ಪರಸ್ಪರ ಡಿಮಾಂಡ್ ನೋಟೀಸ್‌ಗಳಲ್ಲಿ ತಿಳಿಸಿರುವ ಮೊಬಲಗುಗಳನ್ನು ಪರಸ್ಪರ ನೋಟೀಸ್‌ಗಳ ದಿನಾಂಕದಿಂದ 60 ದಿನಗಳ ಒಳಗಾಗಿ ಪಾವತಿ ಮಾಡಲು ಕರೆ ನೀಡಲಾಗಿದೆ. ಮೇಲೆ ತಿಳಿಸಿದ ನೋಟೀಸ್‌ಗಳ ಪ್ರತಿಗಳನ್ನು ಕೆಳ ಸಹಿದಾರರಿಂದ ಪಡೆಯಬಹುದು ಮತ್ತು ಮೇಲೆ ತಿಳಿಸಿದ ಸಾಲಗಾರರು ಇಚ್ಛೆಪಟ್ಟಲ್ಲಿ ಸಂಬಂಧಪಟ್ಟ ಪ್ರತಿಯನ್ನು ಕೆಳ ಸಹಿದಾರರಿಂದ ಯಾವುದೇ ಕೆಲಸದ ದಿನದಂದು ಕಛೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಮೇಲಿನದಕ್ಕೆ ಸಂಬಂಧಿಸಿದಂತೆ ಈ ಕೆಳಗೆ ತಿಳಿಸಿದ ಸಾಲಗಾರರಿಗೆ ಮತ್ತೊಮ್ಮೆ ನೋಟೀಸ್ ನೀಡಿ ಈ ನೋಟೀಸ್ ದಿನಾಂಕದಿಂದ 60 ದಿನಗಳ ಒಳಗಾಗಿ ಕೆಳಗೆ ಪರಸ್ಪರ ಹೆಸರುಗಳಲ್ಲಿ ಸೂಚಿಸಿದ ಮೊಬಲಗುಗಳನ್ನು ಈ ಕೆಳಗೆ ತಿಳಿಸಿದ ಸಾಲಗಾರರು ನಿರ್ವಹಿಸಲಾದ ಸಾಲದ ಒಪ್ಪಂದ ಮತ್ತು ಇತರ ದಸ್ತಾವೇಜು/ಬರಹಗಳು ಯಾವುದೇ ಇದ್ದಲ್ಲಿ ಇವುಗಳ ಅನ್ವಯ ಕೆಳಗೆ ಕಲಂ (ಸಿ) ನಲ್ಲಿ ತಿಳಿಸಿದ ಪರಸ್ಪರ ದಿನಾಂಕಗಳಿಂದ ಹಣ ಪಾವತಿ ಮಾಡುವ ದಿನಾಂಕದವರೆಗೆ ಮತ್ತು / ಅಥವಾ ವಸೂಲಾಗುವವರೆಗೆ ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ಗೆ ಸಂದಾಯ ಮಾಡುವಂತೆ ನೋಟೀಸ್ ನೀಡಲಾಗಿದೆ. ವಿದ್ಯುಕ್ತವಾಗಿ ಸಾಲ ಮರುಪಾವತಿ ಮಾಡುವ ಬಗ್ಗೆ ಭದ್ರತೆಯಾಗಿ ಕೆಳಕಂಡ ಭದ್ರತೆ ಪಡೆದ ಆಸ್ತಿಗಳನ್ನು ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ಮೇಲೆ ತಿಳಿಸಿದ ಪರಸ್ಪರ ಸಾಲಗಾರರು ಅಡಮಾನ ಮಾಡಿರುತ್ತಾರೆ.

| ಕ್ರ.ಸಂ. | ಸಾಲಗಾರರು/ಸಹಸಾಲಗಾರರು/ ಜಾಮೀನುದಾರರು | ಖಾತೆ ಸಂಖ್ಯೆ ಮತ್ತು ಬಾಕಿ ಇರುವ ಮೊತ್ತ | ಡಿಮಾಂಡ್ ನೋಟೀಸಿನ ದಿನಾಂಕ | ಸ್ಥಿರಾಸ್ತಿಗಳ/ಭದ್ರತಾ ಆಸ್ತಿಗಳ ವಿವರ |
|---|---|---|---|---|
| (ಎ) | (ಬಿ) | (ಸಿ) | (ಡಿ) | (ಇ) |
| (1) | ಮೆ॥ ಶ್ರೀ ಆಂಜನೇಯ ಆಗ್ರೋ ಡಿಸ್ಟ್ರಿಬ್ಯೂಟರ್ಸ್<br><br>ಪಾಲುದಾರರು:<br>1) ಡಿ.ಕೆ. ಹನುಮಂತರಾವ್ ಬಿನ್ ಡಿ.ಹೆಚ್. ಕುಲಕರ್ಣಿ.<br>2) ವೀಣಾ ಈಶ್ವರ್ ಕೋಂ ಈಶ್ವರಪ್ಪ.<br>3) ಗಾಯತ್ರಿ ಕೋಂ ಡಿ.ಕೆ. ಹನುಮಂತರಾವ್.<br>4) ಹೆಚ್.ಪಿ. ಹನುಮಂತಪ್ಪ (ಮೃತಿ)ವಾರಸುದಾರರು<br>ಅ) ರೂಪ (ಪತ್ನಿ)<br>ಆ) ಭರತ್ (ಮಗ)<br>ಇ) ಭಾವನ (ಮಗಳು)<br><br>ಜಾಮೀನುದಾರರು:<br>1) ವೈ. ಪರಮೇಶ್ ಬಿನ್ ಬಸಪ್ಪ. ವೈ.<br>2) ಹೆಚ್.ಬಿ. ಪ್ರಕಾಶ್ ಬಿನ್ ಬಸವರಾಜಪ್ಪ. | ಹೆಚ್.ಪಿ.ಎಸ್-71<br>ರೂ.1,09,83,190-00 + ಇತರೆ ಖರ್ಚು, (ದಿನಾಂಕ 27-08-2023 ರ ವರೆಗೆ) | 02-09-2023 | ಆಸ್ತಿ ನಂ.1:- ದಾವಣಗೆರೆ ನಗರದ 5ನೇ ವಾರ್ಡ್, 3ನೇ ಡಿವಿಜನ್, 4ನೇ ಕ್ರಾಸ್, ಕೆ.ಬಿ. ಬಡಾವಣೆ, ದಾವಣಗೆರೆ ಸೈಟ್ ನಂ.ಆರ್/6, ಹಳೆ ಡೋರ್ ನಂ.788/6-7, ಚಾಲ್ತಿ ಡೋರ್ ನಂ.1708, ಅಳತೆ 13 X 40 ಅಡಿಗಳ ಸೊತ್ತಿನಲ್ಲಿರುವ ವಾಸದ ಕಟ್ಟಡ, ಸೊತ್ತಿಗೆ ಚೆಕ್ಕುಬಂದಿ:- ಪೂರ್ವಕ್ಕೆ : ನರಸಿಂಹಶಾಸ್ತ್ರಿಯವರ ಸೊತ್ತು, ಪಶ್ಚಿಮಕ್ಕೆ : ಇದೇ ಡೋರ್ ನಂ. ಪೈಕಿ ಉಳಿದಿರುವ ಜಾಗ, ಉತ್ತರಕ್ಕೆ : ಕನ್ಸರ್‌ವೆನ್ಸಿ ರಸ್ತೆ, ದಕ್ಷಿಣಕ್ಕೆ : ಮುಖ್ಯ ರಸ್ತೆ.<br>ಆಸ್ತಿ ನಂ.2:- ದಾವಣಗೆರೆ ನಗರದ 5ನೇ ವಾರ್ಡ್, 9ನೇ ಡಿವಿಜನ್, ಎಂ.ಸಿ.ಸಿ. ಎ ಬ್ಲಾಕ್, ದಾವಣಗೆರೆ ಡೋರ್ ನಂ.499, ಹಳೆ ಡೋರ್ ನಂ.1162/162, ನಂತರದ ಡೋರ್ ನಂ.2220, ಅಳತೆ 50 X 17½ ಅಡಿಗಳ ಸೊತ್ತಿನಲ್ಲಿರುವ ವಾಸದ ಕಟ್ಟಡ, ಸೊತ್ತಿಗೆ ಚೆಕ್ಕುಬಂದಿ:- ಪೂರ್ವಕ್ಕೆ : ಸೈಟ್ ನಂ.522, ಪಶ್ಚಿಮಕ್ಕೆ : ಮುಖ್ಯ ರಸ್ತೆ, ಉತ್ತರಕ್ಕೆ : ಸೈಟ್ ನಂ.500, ದಕ್ಷಿಣಕ್ಕೆ : ಇದೇ ಸೊತ್ತಿನ ಪೈಕಿ ಉಳಿದಿರುವ ಕರಿಯಪ್ಪನವರ ಸೊತ್ತು. |
| (2) | 1) ಡಿ.ಕೆ. ಹನುಮಂತರಾವ್ ಬಿನ್ ಡಿ.ಹೆಚ್. ಕುಲಕರ್ಣಿ.<br><br>ಜಾಮೀನುದಾರರು:<br>1) ಪ್ರಕಾಶ್. ಹೆಚ್.ಬಿ. ಬಿನ್ ಬಸವರಾಜಪ್ಪ. ಹೆಚ್.ಎಸ್.<br>2) ವೈ. ಪರಮೇಶ್ ಬಿನ್ ಬಸಪ್ಪ. ವೈ. | ಓಎಸ್-1039<br>ರೂ.10,88,974-00 + ಇತರೆ ಖರ್ಚು, (ದಿನಾಂಕ 20-08-2023 ರ ವರೆಗೆ) | | ಆಸ್ತಿ ನಂ.3:- ದಾವಣಗೆರೆ ನಗರದ 4ನೇ ವಾರ್ಡ್, 6ನೇ ಡಿವಿಜನ್, ಬಂಬೂ ಬಜಾರದ ಹಿಂಭಾಗ ದಾವಣಗೆರೆ, ಸೈಟ್ ನಂ.9 ಮತ್ತು 10, ಹಳೆ ಡೋರ್ ನಂ.87/1 ಮತ್ತು 95/1, ಚಾಲ್ತಿ ಡೋರ್ ನಂ.95/1ಎ, ಸಿಟಿ ಸರ್ವೆ ನಂ.2657 ಎ, ಡಿವಿಜನ್ ನಂ.2, ಪ್ರತಿ ಸೈಟಿನ ಅಳತೆ 15 X 62 ಅಡಿಗಳು, ಎರಡು ಸೊತ್ತಿನ ಒಟ್ಟು ಅಳತೆ 30 X 62 ಅಡಿಗಳಾಗಿದ್ದು ಸೊತ್ತಿಗೆ ಚೆಕ್ಕುಬಂದಿ:-<br>ಪೂರ್ವಕ್ಕೆ : ಸೈಟ್ ನಂ.11, ಪಶ್ಚಿಮಕ್ಕೆ : ಸೈಟ್ ನಂ.7 & 8 (ಎರಡು ಸೊತ್ತುಗಳು ರಸ್ತೆಯಾಗಿ ಮಾರ್ಪಟ್ಟಿರುತ್ತವೆ), ಉತ್ತರಕ್ಕೆ : 40 ಅಡಿ ರಸ್ತೆ, ದಕ್ಷಿಣಕ್ಕೆ : ಬೇರೆಯವರ ಸೊತ್ತು. |

* ಅನ್ವಯವಾಗುವಂತೆ ಮುಂಬರುವ ಹೆಚ್ಚಿನ ವಾರ್ಷಿಕ ಬಡ್ಡಿ, ಸುಸ್ತಿ ಬಡ್ಡಿ, ಪ್ರಾಸಂಗಿಕ ವೆಚ್ಚಗಳು, ಖರ್ಚುಗಳು, ಚಾರ್ಜ್‌ಗಳು ಇತ್ಯಾದಿ ಹಣ ಪಾವತಿ ಮತ್ತು ವಸೂಲಿ ದಿನಾಂಕದವರೆಗೆ ಭರಿಸಬೇಕಾಗುವುದು.

ಇದರೊಂದಿಗೆ ಮೇಲೆ ತಿಳಿಸಿದ ಸಾಲಗಾರರು ಪೂರ್ವೋಕ್ತ ರೀತಿಯಲ್ಲಿ ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ಗೆ ಹಣ ಪಾವತಿಸಲು ವಿಫಲರಾದಲ್ಲಿ ಆಗ ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ನವರು ಮೇಲೆ ತಿಳಿಸಿದ ಭದ್ರತೆ ಪಡೆದ ಆಸ್ತಿ/ಸ್ಥಿರಾಸ್ತಿಗಳ ವಿರುದ್ಧ ಸದರಿ ಕಾಯ್ದೆಯ ಸೆಕ್ಷನ್ 13(4)ರ ಅಡಿಯಲ್ಲಿ ಮತ್ತು ಅನ್ವಯವಾಗುವ ನಿಯಮಗಳ ಮೇರೆಗೆ ವೆಚ್ಚಗಳು ಮತ್ತು ಪರಿಣಾಮಗಳಿಗೆ ಸದರಿ ಸಾಲಗಾರರು ಸಂಪೂರ್ಣವಾಗಿ ಹೊಣೆಗಾರರಾಗಿರುವರು.

ಮೇಲೆ ತಿಳಿಸಿದ ಸಾಲಗಾರರು ಮೇಲೆ ತಿಳಿಸಿದ ಕಾಯ್ದೆಯ ಅಡಿಯಲ್ಲಿ ಪೂರ್ವೋಕ್ತ ಭದ್ರತೆ ಪಡೆದ ಆಸ್ತಿ/ಸ್ಥಿರಾಸ್ತಿಯನ್ನು ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ನ ಪೂರ್ವಾನುಮತಿಯನ್ನು ಲಿಖಿತವಾಗಿ ಪಡೆಯದೇ ಮಾರಾಟ, ಗುತ್ತಿಗೆ ಅಥವಾ ಕಾಯ್ದೆಯ ಉಪಬಂಧಗಳನ್ನು ಉಲ್ಲಂಘಿಸುವ ಅಥವಾ ಕೊಡಲಾದಂತೆ ಕಾರಾವಾಸ ಮತ್ತು / ಅಥವಾ ದಂಡಕ್ಕೆ ಬದ್ಧನಾಗಿರತಕ್ಕದ್ದು.

ಸಹಿ/-
**ಅಧಿಕೃತ ಅಧಿಕಾರಿ**
ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ದಾವಣಗೆರೆ

ಸ್ಥಳ : ದಾವಣಗೆರೆ
ದಿನಾಂಕ: 02-09-2023

## ಗ್ರಾಮೀಣ ಬಸ್ ಸೇವೆ ಸಮರ್ಪಕವಾಗಿರಲಿ : ಸಿದ್ದೇಶ್ವರ



ದಾವಣಗೆರೆ, ಸೆ. 2- ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ನೀಡುವ ಧಾವಂತದಲ್ಲಿ ಗ್ರಾಮೀಣ ಭಾಗದ ವಿದ್ಯಾರ್ಥಿ, ವಿದ್ಯಾರ್ಥಿನಿಯರುಗಳಿಗೆ ಯಾವುದೇ ಕಾರಣಕ್ಕೂ ತೊಂದರೆ ಯಾಗದ ರೀತಿಯಲ್ಲಿ ಗ್ರಾಮೀಣ ಬಸ್ ಸೇವೆಯನ್ನು ಸಮರ್ಪಕಗೊಳಿಸುವಂತೆ ಜನರ ಒತ್ತಾಯದ ಮೇರೆಗೆ ಸಾರಿಗೆ ಅಧಿಕಾರಿಗಳಿಗೆ ಸಂಸದ ಜಿ.ಎಂ. ಸಿದ್ಧೇಶ್ವರ ಸೂಚನೆ ನೀಡಿದರು.

ಗ್ರಾಮೀಣ ಭಾಗದಿಂದ ದಾವಣಗೆರೆ ನಗರಕ್ಕೆ ಶಾಲಾ- ಕಾಲೇಜುಗಳಿಗೆ ವ್ಯಾಸಂಗ ಮಾಡಲು ಬರುವ ಸಾಕಷ್ಟು ವಿದ್ಯಾರ್ಥಿ, ವಿದ್ಯಾರ್ಥಿನಿಯರುಗಳು ಸಮರ್ಪಕ ಕೆ.ಎಸ್.ಆರ್.ಟಿ.ಸಿ.ಬಸ್ ಸೇವೆಯಿಲ್ಲದೇ ತೊಂದರೆ ಅನುಭವಿಸುತ್ತಿದ್ದಾರೆ ಎಂಬ ದೂರು ಬಂದ ಹಿನ್ನೆಲೆಯಲ್ಲಿ ಸಂಸದರು ಕೆಎಸ್‌ಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿಗಳಿಗೆ ದೂರವಾಣಿ ಮುಖಾಂತರ ಮಾತನಾಡಿ ಗ್ರಾಮೀಣ ಭಾಗಕ್ಕೆ ಹೆಚ್ಚು ಬಸ್‌ಗಳನ್ನು ಬಿಡುವಂತೆ ಕೇಳಿಕೊಂಡಿದ್ದಾರೆ.

ಜನಸಂಪರ್ಕ ಕಛೇರಿಗೆ ಆಗಮಿಸಿದ ಕೋಲ್ಕುಂಟೆ ಹಾಗೂ ಸುತ್ತಮುತ್ತ ಗ್ರಾಮಗಳ ವಿದ್ಯಾರ್ಥಿ, ವಿದ್ಯಾರ್ಥಿನಿ ಯರುಗಳ ಮನವಿಯನ್ನು ಸಂಸದರು ಆಲಿಸಿದರು. ಕೋಲ್ಕುಂಟೆ ಹಾಗೂ ಸುತ್ತಮುತ್ತಲ ವಿದ್ಯಾರ್ಥಿ, ವಿದ್ಯಾರ್ಥಿನಿ ಯರುಗಳಿಗೆ ಅನುಕೂಲವಾಗುವಂತೆ ಬಸ್ ಓಡಿಸುವಂತೆ ಸಂಸದರು ಸೂಚಿಸಿದ ಹಿನ್ನೆಲೆಯಲ್ಲಿ ಇನ್ನು ಒಂದು ವಾರದೊಳಗೆ ಬಸ್ ಓಡಿಸುವ ಭರವಸೆಯನ್ನು ಕೆ.ಎಸ್.ಟಿ.ಸಿ. ವಿಭಾಗೀಯ ನಿಯಂತ್ರಣಾಧಿಕಾರಿ ನೀಡಿದರು.

ಸರ್ಕಾರ ಬೇಕಾದಷ್ಟು ಉಚಿತ ಭಾಗ್ಯಗಳನ್ನು ನೀಡಲಿ ಬೇಡ ಎನ್ನುವುದಿಲ್ಲ, ಆದರೆ, ಉಚಿತ ನೀಡುವ ಭರದಲ್ಲಿ ಇತರೆಯವರಿಗೆ ತೊಂದರೆ ನೀಡುವುದು ತರವಲ್ಲ ಎನ್ನುವುದು ನನ್ನ ಅನಿಸಿಕೆ ಎಂದರು.

ಗೃಹ ಜ್ಯೋತಿ ಎಂದು ಉಚಿತ ವಿದ್ಯುತ್ ನೀಡುತ್ತಿರುವ ಸರ್ಕಾರ ದಾವಣಗೆರೆ ನಗರದಲ್ಲಿಯೂ ಸಹ ಲೋಡ್ ಶೆಡ್ಡಿಂಗ್ ವಿರುತ್ತಿದೆ. ರೈತರ ಪಂಪ್‌ಸೆಟ್‌ಗಳಿಗೆ ಸರಿಯಾದ ವಿದ್ಯುತ್ ಪೂರೈಕೆಯಾಗುತ್ತಿಲ್ಲ, ಆರು ತಾಸು ಕರೆಂಟ್ ಕೊಡಬೇಕಾದ ಜಾಗದಲ್ಲಿ ಮೂರು ತಾಸು ಕರೆಂಟ್ ಕೊಡಲಾಗುತ್ತಿದೆ ಎಂದು ಜನಸಂಪರ್ಕ ಕಛೇರಿಯಲ್ಲಿ ನೆರೆದಿದ್ದ ಸಾರ್ವಜನಿಕರಿಗೆ ತಿಳಿಸಿದರು.

ಮುಖಂಡರಾದ ಲೋಕಿಕೆರೆ ನಾಗರಾಜ್, ಮಾಜಿ ಮೇಯರ್ ಅಜಯ್‌ಕುಮಾರ್, ಕೂಲಂಬಿ ಬಸವರಾಜ್, ಕೋಲ್ಕುಂಟೆ ಅಣ್ಣಪ್ಪ, ಬಸವರಾಜ್. ಸೇರಿದಂತೆ ಇತರರು ಜನಸಂಪರ್ಕ ಸಭೆಯಲ್ಲಿದ್ದರು.

### ಸಿಗ್ನಲ್ ಬಳಿಯ ಬಸ್ ಶೆಲ್ಟರ್ ತೆರವುಗೊಳಿಸಿ

ದಾವಣಗೆರೆ, ಸೆ. 2- ನಗರದ ಐಟಿಐ ಕಾಲೇಜಿನ ಸಿಗ್ನಲ್ ಬಳಿ ಇರುವ ಬಸ್ ನಿಲ್ದಾಣವನ್ನು ತೆರವುಗೊಳಿಸಿ ಹೊಸದಾಗಿ ನಿರ್ಮಿಸಿರುವ ಬಸ್ ನಿಲ್ದಾಣದ ಮುಂದೆ ಬಸ್ ನಿಲ್ಲಿಸುವಂತೆ ಎಸ್. ಹನುಮಂತರಾವ್ ಒತ್ತಾಯಿಸಿದ್ದಾರೆ. ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಕಾರಣ ಸಂಚಾರಿ ಪೊಲೀಸರು ಈ ಬಗ್ಗೆ ಗಮನಹರಿಸಿ, ಸಂಬಂಧಪಟ್ಟ ಮೇಲಾಧಿಕಾರಿಗಳಿಗೆ ಮಾಹಿತಿ ತಿಳಿಸಬೇಕೆಂದು ಆಗ್ರಹಿಸಿದ್ದಾರೆ.

# ಖರೀದಿ ಕೇಂದ್ರಕ್ಕೆ ಮಾರಾಟ ಮಾಡಿದ ರಾಗಿ ಹಣ ಬಿಡುಗಡೆಗೆ ಸಿಎಂ ಆದೇಶ



**ಮಾಯಕೊಂಡ ಶಾಸಕ ಕೆ.ಎಸ್.ಬಸವಂತಪ್ಪ ನೇತೃತ್ವದಲ್ಲಿ ಸಿಎಂಗೆ ಮನವಿ ಸಲ್ಲಿಸಿದ ರೈತರು**

ದಾವಣಗೆರೆ, ಸೆ. 2 - ದಾವಣಗೆರೆ ಖರೀದಿ ಕೇಂದ್ರದಲ್ಲಿ ರಾಗಿ ಮಾರಾಟ ಮಾಡಿದ ರೈತರಿಗೆ ಕೂಡಲೇ ಹಣವನ್ನು ಬಿಡುಗಡೆ ಮಾಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಂಬಂಧಪಟ್ಟ ರಾಗಿ ಖರೀದಿ ಕೇಂದ್ರದ ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚನೆ ನೀಡಿದ್ದಾರೆ.

ಬೆಂಗಳೂರಿನ ಮುಖ್ಯಮಂತ್ರಿಗಳ ಗೃಹ ಕಚೇರಿಯಲ್ಲಿ ನಡೆದ ಜನತಾ ದರ್ಶನದಲ್ಲಿ ಮಾಯಕೊಂಡ ಶಾಸಕ ಕೆ.ಎಸ್.ಬಸವಂತಪ್ಪ ನೇತೃತ್ವದಲ್ಲಿ ತೆರಳಿದ್ದ ದಾವಣಗೆರೆ ಮತ್ತು ಜಗಳೂರು ತಾಲ್ಲೂಕಿನ ರೈತ ಮುಖಂಡರು, ರಾಗಿ ಖರೀದಿ ಕೇಂದ್ರದಲ್ಲಿ ಮಾರಾಟ ಮಾಡಿದ್ದ ರಾಗಿಯ ಹಣವನ್ನು ಕೂಡಲೇ ಬಿಡುಗಡೆ ಮಾಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಶಾಸಕ ಕೆ.ಎಸ್. ಬಸವಂತಪ್ಪ, ಮೊದಲೇ ಈ ಬಾರಿ ಮುಂಗಾರು ಮಳೆ ಇಲ್ಲದೆ ಬೆಳೆಗಳು ಒಣಗಿ ರೈತರು ತತ್ತರಿಸಿ ಹೋಗಿದ್ದಾರೆ.

ಅಲ್ಲದೇ, ಕಳೆದ ವರ್ಷ ಬೆಳೆದ ರಾಗಿಯನ್ನು ಖರೀದಿ ಕೇಂದ್ರಕ್ಕೆ ಮಾರಾಟ ಮಾಡಿದ ರೈತರಿಗೆ ಬಾಕಿ ಹಣ ಬಿಡುಗಡೆ ಮಾಡಿಲ್ಲ. ಹೀಗಾಗಿ ಇತ್ತ ರಾಗಿ ಮಾರಾಟ ಮಾಡಿದ ಹಣ ಇಲ್ಲದೆ, ಅತ್ತ ಈ ವರ್ಷ ಮಳೆ ಇಲ್ಲದೆ ಬಿತ್ತನೆ ಮಾಡಿದ ಬೆಳೆ ಹಾನಿಯಾಗಿ ಸಾಲಗಾರರಾಗಿರುವ ರೈತರು ದಿಕ್ಕು ತೋಚದಂತಾಗಿದೆ. ಕೂಡಲೇ ಬಾಕಿ ಹಣ ಬಿಡುಗಡೆ ಮಾಡುವಂತೆ ಶಾಸಕರು ಮುಖ್ಯಮಂತ್ರಿಗಳಿಗೆ ಮನವರಿಕೆ ಮಾಡಿದರು.

ಆಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಕ್ಷಣವೇ ಸಂಬಂಧಪಟ್ಟ ರಾಗಿ ಖರೀದಿ ಕೇಂದ್ರದ ವ್ಯವಸ್ಥಾಪಕ ನಿರ್ದೇಶಕರಿಗೆ ದೂರವಾಣಿ ಸಂಪರ್ಕ ಪಡೆದು ರಾಗಿ ಮಾರಾಟ ಮಾಡಿದ ದಾವಣಗೆರೆ ಜಿಲ್ಲೆಯ ರೈತರ ಬಾಕಿ ಹಣವನ್ನು ಕೂಡಲೇ ಬಿಡುಗಡೆ ಮಾಡುವಂತೆ ಆದೇಶ ನೀಡಿದ್ದಾರೆ.

ಈ ಸಂದರ್ಭದಲ್ಲಿ ಖರೀದಿ ಕೇಂದ್ರಕ್ಕೆ ರಾಗಿ ಮಾರಾಟ ಮಾಡಿದ ರೈತ ಫಲಾನುಭವಿಗಳು ಹಾಜರಿದ್ದರು.

## ಕೇಂದ್ರ ಸಚಿವರ ಪುತ್ರನ ವಿರುದ್ಧ ಶಸ್ತ್ರಾಸ್ತ್ರ ಕಾಯ್ದೆ ಪ್ರಕರಣ

ಲಖ್ನೌ, ಸೆ. 2 – ಕೇಂದ್ರ ಸಚಿವ ಕೌಶಲ್ ಕಿಶೋರ್ ಪುತ್ರನ ವಿರುದ್ಧ ಶಸ್ತ್ರಾಸ್ತ್ರ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ. ಅವರ ಮನೆಯಲ್ಲಿ 30 ವರ್ಷದ ವ್ಯಕ್ತಿ ನಿಗೂಢವಾಗಿ ಗುಂಡೇಟಿನಿಂದ ಸಾವನ್ನಪ್ಪಿದ ನಂತರ ಈ ಕ್ರಮ ತೆಗೆದುಕೊಳ್ಳಲಾಗಿದೆ.

ತಮ್ಮ ಪುತ್ರ ವಿಕಾಸ್ ಕಿಶೋರ್ ದೆಹಲಿಯ ನಿವಾಸದಲ್ಲಿ ನೆಲೆಸಿರುವುದಾಗಿ ಸಚಿವ ಕೌಶಲ್ ಕಿಶೋರ್ ಹೇಳಿದ್ದರು.

ವಿಕಾಸ್ ಸ್ನೇಹಿತ ವಿನಯ್ ಶ್ರೀವಾಸ್ತವ ಎಂಬುವವರನ್ನು ಲಖ್ನೌದಲ್ಲಿರುವ ಸಚಿವರ ಮನೆಯಲ್ಲಿ ಹತ್ಯೆ ಮಾಡಲಾಗಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರನ್ನು ಬಂಧಿಸಲಾಗಿದೆ.

ವಿನಯ್ ಮೇಲೆ ಗುಂಡು ಹಾರಿಸಲು ಆರೋಪಿ ಬಳಸಿರುವ ಬಂದೂಕು ವಿಕಾಸ್‌ಗೆ ಸೇರಿದ್ದಾಗಿದೆ. ಈ ಶಸ್ತ್ರ ಉತ್ತರ ಪ್ರದೇಶದ ಅನುಮತಿ ಮಾತ್ರ ಹೊಂದಿದೆ. ಹೀಗಾಗಿ ದೆಹಲಿಗೆ ತರಲು ಸಾಧ್ಯವಿಲ್ಲ ಎಂದು ಸಚಿವ ಕೌಶಲ್ ಹೇಳಿದ್ದರು.

ಆರೋಪಿಗಳಾದ ಅಜಯ್ ರಾವತ್, ಅಂಕಿತ್ ವರ್ಮ ಹಾಗೂ ಶಮೀಮ್ ಎಂಬುವವರು ಸಚಿವರ ಮನೆಗೆ ಜೂಜಾಡಲು ವಿನಯ್‌ಗೆ ಕರೆದಿದ್ದರು. ಜೂಜಾಟದ ವೇಳೆ ಜಗಳವಾಗಿ ಗುಂಡು ಹಾರಿಸಿ ಹತ್ಯೆ ಮಾಡಲಾಗಿದೆ ಎಂದು ಪೊಲೀಸರಲ್ಲಿ ದೂರು ದಾಖಲಿಸಲಾಗಿತ್ತು.

ಅಂಕಿತ್ ಎಂಬಾತ ಸಚಿವರ ಪುತ್ರನ ಅನುಮತಿ ಹೊಂದಿದ ರಿವಾಲ್ವರ್ ಬಳಸಿ ಹತ್ಯೆ ಮಾಡಿರುವುದಾಗಿ ದೂರಿನಲ್ಲಿ ತಿಳಿಸಲಾಗಿದೆ.


**ಸೈಟುಗಳು ಮಾರಾಟಕ್ಕಿವೆ**

ಹಳೇ ಡಾಲರ್ಸ್ ಕಾಲೋನಿಯಲ್ಲಿ

40×50 ಪೂರ್ವ ದಕ್ಷಿಣ ಕಾರ್ನರ್ - 1

40×50 ಉತ್ತರ ಪಶ್ಚಿಮ ಕಾರ್ನರ್ - 2

30×40 ದಕ್ಷಿಣ ಪಶ್ಚಿಮ ಕಾರ್ನರ್ - 3

(ಎಲ್ಲಾ ಸೈಟುಗಳು 60 ಅಡಿ & 30 ಅಡಿ ರಸ್ತೆ ಹೊಂದಿರುತ್ತದೆ)

ಸಂಪರ್ಕಿಸಿ : 6363279990


## ಉಲ್ಲಂಘನೆ : ದಂಡ ಕಟ್ಟಲು ಶೇ.50ರಷ್ಟು ರಿಯಾಯಿತಿ

ದಾವಣಗೆರೆ, ಸೆ.2- ಸಂಚಾರಿ ನಿಯಮ ಉಲ್ಲಂಘನೆ ಪ್ರಕರಣದಲ್ಲಿ ಸೆ.9ರವರೆಗೆ ಶೇ.50ರಷ್ಟು ರಿಯಾಯಿತಿಯಲ್ಲಿ ದಂಡ ಕಟ್ಟಲು ಅವಕಾಶ ವಿದ್ದು, ಸದುಪಯೋಗ ಪಡಿಸಿಕೊಳ್ಳುವಂತೆ ಪೊಲೀಸ್ ಇಲಾಖೆಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.ಜಿಲ್ಲೆಯಲ್ಲಿ 2023ರ ಫೆಬ್ರವರಿ 11ಕ್ಕಿಂತ ಪೂರ್ವದಲ್ಲಿ ದಾಖಲಾಗಿದ್ದ ಪ್ರಕರಣಗಳ ಪೈಕಿ 1,03,429 ಸಂಚಾರಿ ನಿಯಮ ಉಲ್ಲಂಘನೆ ಪ್ರಕರಣಗಳು ದಂಡ ಪಾವತಿಯಾಗದೇ ಬಾಕಿ ಇವೆ.

ದಂಡ ಪಾವತಿಸದೇ ಬಾಕಿ ಉಳಿಸಿಕೊಂಡವರು ಶೇ.50ರಷ್ಟು ರಿಯಾಯಿತಿ ಸೌಲಭ್ಯ ಪಡೆದು ಆನ್‌ಲೈನ್ ಸೇವಾ ಕೇಂದ್ರಗಳಾದ ದಾವಣಗೆರೆ-1, ಕರ್ನಾಟಕ-1 ಹಾಗೂ ದಾವಣಗೆರೆ ದಕ್ಷಿಣ ಹಾಗೂ ಉತ್ತರ ಸಂಚಾರ ಪೊಲೀಸ್ ಠಾಣೆಗಳಲ್ಲಿ ದಂಡ ಪಾವತಿಸುವಂತೆ ಪ್ರಕಟಣೆ ತಿಳಿಸಿದೆ.


**COMMERCIAL SPACE FOR RENT**




**MAHESH PLAZA**

Opp. to Old bus stand P.B. Road, Davanagere.

Offers

3000 sq.ft for commercial establishment for Rent at 2nd Floor

With lift & ramp facility and good parking space.

CONTACT: 94492 50881, 98444 13245




**ಬೇಕಾಗಿದ್ದಾರೆ**

ಫರ್ನಿಚರ್ ಅಂಗಡಿಯಲ್ಲಿ ಕೆಲಸ ಮಾಡಲು


- ಅನುಭವಿ ಸೇಲ್ಸ್ ಮ್ಯಾನ್ - 1
- ಸೇಲ್ಸ್ ಗರ್ಲ್ಸ್ - 2
- ಫಿಟ್ಟರ್ - 1

ಸಂಪರ್ಕಿಸಿ : 84535 55777




# ಪೊಲೀಸ್ ಶ್ವಾನದಳದ ಸೌಮ್ಯ ಇನ್ನಿಲ್ಲ

**ಎಸ್ಪಿ ನೇತೃತ್ವದಲ್ಲಿ ಶ್ರದ್ಧಾಂಜಲಿ, ಗೌರವದೊಂದಿಗೆ ಅಂತ್ಯಕ್ರಿಯೆ**





ದಾವಣಗೆರೆ, ಸೆ.2- ಜಿಲ್ಲಾ ಶ್ವಾನ ದಳ ವಿಭಾಗದಲ್ಲಿದ್ದ ಸೌಮ್ಯ ಹೆಸರಿನ ಶ್ವಾನ ಮೃತಪಟ್ಟ ಹಿನ್ನೆಲೆಯಲ್ಲಿ ಇಲ್ಲಿನ ಡಿಎಆರ್ ಮೈದಾನದಲ್ಲಿ ಗೌರವ ವಂದನೆ ಸಲ್ಲಿಸಿ, ಮೈದಾನದ ಪಕ್ಕದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಎಸ್ಪಿ ಉಮಾ ಪ್ರಶಾಂತ್ ನೇತೃತ್ವದಲ್ಲಿ ಸೌಮ್ಯಗೆ ಗೌರವ ವಂದನೆ ಸಲ್ಲಿಸಲಾಯಿತು. ಮೂರು ಸುತ್ತು ಗುಂಡು ಹಾರಿಸಿ ಸರ್ಕಾರಿ ಗೌರವದ ಮೂಲಕ ಅಂತ್ಯಕ್ರಿಯೆ ನೆರವೇರಿಸಲಾಯಿತು. 2018ರ ಜೂನ್ 8ರಂದು ಜನಿಸಿದ್ದ ಲ್ಯಾಬ್ರೋಡಾರ್ ತಳಿಯ ಈ ಶ್ವಾನ 2019ರ ಮೇ 4ರಂದು ದಾವಣಗೆರೆ ಶ್ವಾನ ದಳ ವಿಭಾಗಕ್ಕೆ ಸೇರ್ಪಡೆಯಾಗಿತ್ತು. ಇತ್ತೀಚೆಗೆ ಸ್ಪೀನೋ ಮೆಗಾಲಿನ್ ಕಾಯಿಲೆಯಿಂದ ಬಳಲುತ್ತಿತ್ತು.

ವಾಸನೆ ಮೂಲಕ ಸ್ಫೋಟಕ ಪತ್ತೆ ಹಚ್ಚುತ್ತಿದ್ದ ಶ್ವಾನ ಸೌಮ್ಯ, ಕಾಡಜ್ಜಿ ಮತ್ತು ಕಾಶೀಪುರದಲ್ಲಿ ಅಕ್ರಮವಾಗಿಟ್ಟ ಜಿಲೆಟಿನ್ ಪತ್ತೆ ಹಚ್ಚಿತ್ತು. ಪ್ರಧಾನಿ ನರೇಂದ್ರ ಮೋದಿ, ರಾಷ್ಟ್ರಪತಿ, ರಾಜ್ಯಪಾಲರು ರಾಜ್ಯದ ಮುಖ್ಯಮಂತ್ರಿಗಳಿಗೆ ಭದ್ರತೆ ನೀಡುವ ಕಾರ್ಯದಲ್ಲಿ ಪ್ರಮುಖ ಪಾತ್ರ ವಹಿಸಿತ್ತು.

ಅಪರಾಧ ಪ್ರಕರಣಗಳನ್ನು ಪತ್ತೆ ಮಾಡುತ್ತಿದ್ದ ಶ್ವಾನ ತುಂಗಾ ಸಾವಿನ ನಂತರ ಇದೀಗ ಸೌಮ್ಯ ಮೃತಪಟ್ಟಿದೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್, ಡಿಎಆರ್ ಡಿವೈಎಸ್‌ಪಿ ಪ್ರಕಾಶ್ ಟಿ.ಪಿ., ರಿಸರ್ವ್ ಪೊಲೀಸ್ ಇನ್‌ಸ್ಪೆಕ್ಟರ್ ಸೋಮಶೇಖರ್, ಡಾಗ್ ಹ್ಯಾಂಡ್ಲರ್ ರೇವಣಸಿದ್ದಪ್ಪ, ರಾಘವೇಂದ್ರ ಸೇರಿದಂತೆ ಪೊಲೀಸ್ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಗಳು ಅಂತ್ಯಕ್ರಿಯೆ ಕಾರ್ಯದಲ್ಲಿ ಭಾಗವಹಿಸಿದ್ದರು.


**MARUTI SUZUKI**

Shakti Auto Mart, Hubli a leading Spare Parts Distribution Company for Maruti Suzuki India Limited in Karnataka is looking for young, dynamic, result oriented experienced graduate candidates for the post of;

**1. RO IN CHARGE -1**
(For our DAVANAGERE outlet)
**Educational Qualification:**
Minimum Degree/Diploma with at least 3-4 years of experience in sales.Admin experience or some experience in automobile field is preferred.

**2. SALES EXECUTIVE - 3**
(For our DAVANAGERE outlet)
**Educational Qualification:**
Any Degree / Diploma 2-3 years experience in Automobiles fields. Fresher can also apply for trainee position.

**Venue:** SHAKTI AUTO MART
1st floor, Madiman Complex,
Neeligin Road, HUBLI.
Apply Here:
accountsshakti@yahoo.com &
shaktihrmanager@gmail.com

9739006834, 9902580790


## ಚಿಕ್ಕನಹಳ್ಳಿ ಟಿ.ಎಸ್. ಚನ್ನಬಸಪ್ಪ ನಿಧನ



ಜನನ : 23.05.1955 ಮರಣ : 02.09.2023

ದಾವಣಗೆರೆ ತಾಲ್ಲೂಕು ಚಿಕ್ಕನಹಳ್ಳಿ ಗ್ರಾಮದ ವಾಸಿ

**ತೋಟದ ಟಿ.ಎಸ್. ಚನ್ನಬಸಪ್ಪ**

ಇವರು ದಿನಾಂಕ 02.09.2023ರ ಶನಿವಾರ ಸಂಜೆ 6.45ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ 68 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ಸಹೋದರ, ಸೊಸೆ, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 03.09.2023ರ ಭಾನುವಾರ ಮಧ್ಯಾಹ್ನ 12.30ಕ್ಕೆ ಮೃತರ ಸ್ವಗ್ರಾಮವಾದ ದಾವಣಗೆರೆ ತಾಲ್ಲೂಕು ಚಿಕ್ಕನಹಳ್ಳಿ ಗ್ರಾಮದ ಮೃತರ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ

ಮೊ : 78926 06683, 94485 35071


**ಗೃಹಶೋಭೆ ಮಾನ್‌ಸೂನ್ ಶಾಪಿಂಗ್ ಫೆಸ್ಟಿವಲ್**

**ಗೃಹಶೋಭೆ**





ಸೆಪ್ಟೆಂಬರ್ 1 ರಿಂದ 10 ರವರೆಗೆ
ಸರ್ಕಾರಿ ಹೈಸ್ಕೂಲ್ ಮೈದಾನ
ಮಹಾನಗರ ಪಾಲಿಕೆ ಹತ್ತಿರ, ದಾವಣಗೆರೆ

ENTRY Rs. 10/- Children Below 10 Years Free Entry PARKING FREE


॥ ಶ್ರೀ ಉಜ್ಜಯಿನಿ ಮರುಳಸಿದ್ಧೇಶ್ವರ ಪ್ರಸನ್ನ ॥



## ಕೈಲಾಸ ಶಿವಗಣಾರಾಧನೆ ಆಹ್ವಾನ



ದಾವಣಗೆರೆ ಜಿಲ್ಲೆ, ಹರಿಹರ ತಾ॥ ದೇವರಬೆಳಕೆರೆ ಗ್ರಾಮದ

**ಶ್ರೀ ಎ.ಪಿ. ಗಣೇಶ,** ಬಿಲ್ಡರ್ಸ್ & ಲ್ಯಾಂಡ್ ಡೆವಲಪರ್ಸ್

ಇವರುಗಳು ಮಾಡುವ ವಿಜ್ಞಾಪನೆಗಳು.

ದಿನಾಂಕ : 26.08.2023ನೇ ಶನಿವಾರ ಬೆಳಿಗ್ಗೆ 11.30ಕ್ಕೆ ನಮ್ಮ ಪೂಜ್ಯ ತಂದೆಯವರಾದ

**ಅಂಗಡಿ ಪರಮೇಶ್ವರಪ್ಪ (ಕೋಲ್ಕುಂಟೆ)**

ಮಾಜಿ ಕಾರ್ಯದರ್ಶಿಗಳು ಹಾಗೂ ಹಾಲಿ ನಿರ್ದೇಶಕರು ಶ್ರೀ ಮೈಲಾರಲಿಂಗೇಶ್ವರ ವಿದ್ಯಾಸಂಸ್ಥೆ, ದೇವರಬೆಳಕೆರೆ.

ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**"ಕೈಲಾಸ ಶಿವಗಣಾರಾಧನೆ"ಯನ್ನು**

ಶ್ರೀಶ್ರೀಶ್ರೀ ಷ.ಬ್ರ. ಓಂಕಾರೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು, ಪುರವರ್ಗ ಹಿರೇಮಠ, ಶ್ರೀಕ್ಷೇತ್ರ ಆವರಗೊಳ್ಳ ಇವರ ದಿವ್ಯ ಸಾನ್ನಿಧ್ಯದಲ್ಲಿ ದಿನಾಂಕ : 03.09.2023ನೇ ಭಾನುವಾರ ಬೆಳಿಗ್ಗೆ 10.30 ಗಂಟೆಗೆ ಹರಿಹರ ತಾಲ್ಲೂಕು, ದೇವರಬೆಳಕೆರೆ ಗ್ರಾಮದ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :

ಮಕ್ಕಳಾದ : ಎ.ಪಿ. ಜಯಪ್ರಕಾಶ್, ಎ.ಪಿ. ಕಿರಣ್ ಕುಮಾರ್, ಎ.ಪಿ. ಗಣೇಶ
ಶ್ರೀಮತಿ ವೀಣಾ ವೀರನಗೌಡ ದಳವಾಯಿ, ಮೊಮ್ಮಕ್ಕಳು, ಸಹೋದರ, ಸಹೋದರಿಯರು, ಅಳಿಯಂದಿರು, ಸೊಸೆಯಂದಿರು ಹಾಗೂ ಅಪಾರ ಬಂಧು-ಬಳಗ. ಫೋ. : 87227 14217, 9880657230

ವಿ.ಸೂ.: ಆಹ್ವಾನ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ, ಆಗಮಿಸಬೇಕಾಗಿ ವಿನಂತಿ.